ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಆಗಸ್ಟ್-೨೦೦೭ ಸಂಚಿಕೆ-೧



ಸ್ವತಂತ್ರ ಭಾರತದಲ್ಲಿ ಬಂಧಿತವಾಗುತ್ತಿರುವ ಮೌಲ್ಯಗಳು !

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಅಗಸ್ಟ್-೨೦೦೭
ಸಂಪುಟ-೮
ಸಂಚಿಕೆ-೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೮೭೪೪
e-mail - janapada@yahoo.com

ಹಂಬಲವು ಹಣ್ಣಾಗಿ ಚಿರವಾಯಿತು

ಈ ಬೆಳಗು ಬಾಳಿನಲಿ ಈ ರುಚಿರ ಸೀಮೆಯಲಿ
ಭಾವ ಮಂದಿರ ಗಂಟೆ ತೂಗಾಡಲಿ
ಬೇವು ಜಾಲಿಯ ಹೊಗೆಗೆ ತಾಗಿರುವ
ಈ ಎದೆಯು
ಗಂಧ ಮಲ್ಲಿಗೆ ರಸದಿ ಈಜಾಡಲಿ

ಓ ಬಾನ ದೇವತೆಯೆ ಓ ಬಾಳ ನೇಹತಿಯೆ
ನಿನ್ನ ಮೊಲೆಗಳನಪ್ಪಿ ನಾ ಅತ್ತೆನು
ಈ ದುಃಖ ಬಾಳಿನಲಿ ಈ ವೈರ ತೇರಿನಲಿ
ನಿನ್ನ ಗಲ್ಲಕೆ ಮಲಗಿ ಮುದ್ದಿಟ್ಟೆನು

ಈ ಪ್ರೀತಿಯಾಟದಲಿ ನಿನ್ನುದರ ಕೂಟದಲಿ
ನಾಟಲಾರದು ವಿಷದ ಕಾರ್ಗತ್ತಲೆ
ಈಂದುಂಟಿಯ ಕೆಂಪಿನಲಿ ಈಂಟಿರುವ ಜೇನಿನಲಿ
ಮೀಂಟಲಾರದು ಭವದ ಕಾರ್ಗತ್ತಲೆ

ತೇಲು ಮೇಲಿನ ಮಾತು
ಮುಗಿಲು ಮುಗಿಲಿನ ಸೇತು
ಸಾಕು ಮಾಡುವೆ ನಾನು ಈಗಾಗಲೆ
ಅಂತರದ ಕಣ್ಣಿನಲಿ ದೂರಲಿಂಗವ ಕಂಡು
ಕಾಣದಂತೆಯೆ ಇರುವ ಮುನ್ನೀಗಲೆ

ಜಯವಾಯ್ತು ಹಸಿರಿನಲಿ
ನಯವಾಯ್ತು ಹೊಗರಿನಲಿ
ಲಯವಾಗಿ ಸವಿಜೇನ ಕೊಡತುಂಬಿತು
ಓಂಕಾರ ಒಂದಾಗಿ ಸಾಕಾರ ಹಲವಾಗಿ
ಹಂಬಲವು ಹಣ್ಣಾಗಿ ಚಿರವಾಯಿತು.

- ಪ್ರೊ. ಜಿ.ಎಚ್. ಹನ್ನೆರಡುಮಠ

ವಿಚಾರ ದೀಪ್ತಿ

ದೆಹಲಿಯಲ್ಲಿರುವ ಪ್ರತಿಷ್ಠಿತ ಸೇಂಟ್ ಸ್ಟೀಫನ್ಸ್ ಕಾಲೇಜು ಶೇ ೧೦ ರಷ್ಟು ಸ್ಥಾನಗಳನ್ನು ದಲಿತ ಕ್ರಿಶ್ಚಿಯನ್ನರಿಗೆ ಮೀಸಲಿಡಲು ತೀರ್ಮಾನಿಸಿದೆ ಮತ್ತು ಈ ಪ್ರಮಾಣವನ್ನು ಶೇ ೬೦ಕ್ಕೆ ಇಳಿಸಿದೆ. ಇದರಿಂದಾಗಿ ದೇಶದ ಅತ್ಯಂತ ಪ್ರತಿಷ್ಠಿತ ಉನ್ನತ ಸಂಸ್ಥೆಯೊಂದು ತನ್ನ ಸಮುದಾಯಕ್ಕಾಗಿಯೇ ಶೇ ೪೦ ರಷ್ಟು ಸ್ಥಾನಗಳನ್ನು ಕಾಯ್ದಿರಿಸಿದಂತಾಗಿದೆ. ಗುಣಮಟ್ಟದ ಅವನತಿಯ ಭಯವನ್ನು ತಡೆಗಟ್ಟುವುದಕ್ಕಾಗಿ ಆ ಕಾಲೇಜು ಯೋಗ್ಯತಾ ತನಿಖೆ ಅಂದರೆ ಖಾಸಗಿ ಪಾಠವೆಂಬ ನಯವಾದ ಮಾರ್ಗವನ್ನು ಪ್ರಾರಂಭಿಸಿದೆ. ಈ ಸಂಸ್ಥೆ ದೆಹಲಿ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾಗಿದೆ. ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ಅಲ್ಪಸಂಖ್ಯಾತರ ಸಂಸ್ಥೆಯೆಂಬ ಮನ್ನಣೆಯ ಲಾಭವನ್ನೂ ಪಡೆಯುತ್ತಿದೆ ಆದರೆ ಅದು ಸ್ವಾಯತ್ತ ಸಂಸ್ಥೆಯೂ ಆಗಿಲ್ಲ ಮತ್ತು ತನ್ನದೆ ಸ್ವಂತ ಸಂಪನ್ಮೂಲವನ್ನೂ ಕ್ರೂಢೀಕರಿಸುತ್ತಿಲ್ಲ. ಹೀಗಿದ್ದಾಗ್ಯೂ ಆ ಕಾಲೇಜಿನ ಆಡಳಿತದಲ್ಲಿ ವಿಶ್ವವಿದ್ಯಾನಿಲಯಕ್ಕಾಗಲಿ, ಯು.ಜಿ.ಸಿ.ಗಾಗಲಿ ಯಾವುದೇ ಪಾತ್ರವಿಲ್ಲ! ಪ್ರವೇಶ, ನಿಯುಕ್ತಿ ಮತ್ತು ಖರ್ಚುವೆಚ್ಚಗಳ ವಿಚಾರದಲ್ಲಿ ಯಾವ ಪಾತ್ರವೂ ಇಲ್ಲ. ಆಡಳಿತ ಮಂಡಳಿಗೆ ಅನುಕೂಲವಾಗುವ ಹಾಗೆ ಅದು ನಿಯಮಗಳನ್ನು ತಿರುಚುತ್ತದೆ. ದೆಹಲಿ ವಿಶ್ವವಿದ್ಯಾನಿಲಯದ ಇನ್ನು ಇತರ ಶೇ. ೭೫ ಕಾಲೇಜುಗಳು ಕೂಡ ಬಲವಾದ ಸಮುದಾಯದ ಕುಮ್ಮಕ್ಕನ್ನು ಹೊಂದಿವೆ. ಅವು ಕೂಡ ವ್ಯಾಪಾರ ನಡೆಸಲು ಸಮರ್ಥವಾಗಿವೆ. ದೆಹಲಿ ರಾಜ್ಯದ ಆಡಳಿತಕ್ಕೆ ಅಥವಾ ಶೈಕ್ಷಣಿಕ ಟ್ರಸ್ಟ್‌ಗಳಿಗೆ ಒಳಪಟ್ಟ ಆ ಕಾಲೇಜುಗಳು ನಿಯಮಗಳನ್ನು ಮುರಿಯುವುದರಲ್ಲಿ ಕುಖ್ಯಾತವಾಗಿವೆ. ತಮ್ಮನ್ನು ತಾವು ಸರ್ಕಾರಕ್ಕಿಂತ ದೊಡ್ಡವೆಂದು ಭಾವಿಸಿ ತಮ್ಮ ಮನಬಂದಂತೆ ವರ್ತಿಸುತ್ತವೆ. ಅಧ್ಯಾಪಕರು ಸಂಘಟಿತರಾಗಿದ್ದಾರೆ, ಬಲಿಷ್ಠವಾಗಿದ್ದಾರೆ. ಸಾರ್ವಜನಿಕರು ಅವುಗಳ ಕಾರ್ಯಾಚರಣೆಯಲ್ಲಿ ಭಾಗವಹಿಸುವಂತಿಲ್ಲ. ವಿಶ್ವವಿದ್ಯಾನಿಲಯದೊಂದಿಗಿನ ಸಂಬಂಧವನ್ನು ಕಡಿತಗೊಳಿಸಲಾಗುವುದೆಂಬ ಎಚ್ಚರಿಕೆಯಾಗಲಿ ಅಥವಾ ಅನುದಾನವನ್ನು ತಡೆಹಿಡಿಯಲಾಗುವುದೆಂಬ ಎಚ್ಚರಿಕೆಯಾಗಲಿ ಯಾವ ಪರಿಣಾಮವನ್ನೂ ಅವುಗಳ ಮೇಲೆ ಬೀರುತ್ತಿಲ್ಲ. ಮುಂಬಯಿಯಲ್ಲಿ ಇತ್ತೀಚಿಗೆ ಕಾಲೇಜುಗಳಿಗೆ ಎರಡು ಪಾಳಿಗಳಲ್ಲಿ ನಡೆಯಲು ಅನುಮತಿ ಕೊಡಲಾಗಿದೆ. ಆಗ ಸ್ವಾಭಾವಿಕವಾಗಿ ವಿದ್ಯಾರ್ಥಿಗಳ ಪ್ರವೇಶದ ಸಂಖ್ಯೆ ದ್ವಿಗುಣಗೊಳ್ಳುತ್ತದೆ. ಅಧ್ಯಾಪಕರನ್ನು ಇನ್ನೂ ನಿಯುಕ್ತಿಯೇ ಮಾಡಿರುವುದಿಲ್ಲ ಅದೇ ಶಿಕ್ಷಕರು ಎರಡನೆಯ ಪಾಳಿಯಲ್ಲೂ ಕೆಲಸಮಾಡುತ್ತಾರೆ. ಇದು ದೈಹಿಕವಾಗಿ ಸಾಧ್ಯವೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಈ ಎರಡು ಉದಾಹರಣೆಗಳು ವಿದೇಶಿ ನೇರ ಬಂಡವಾಳದ ಹೂಡಿಕೆಯಿಂದಾಗಿ ಕಾಲೇಜುಗಳ ಆಡಳಿತ ಹೇಗೆ ನಡೆಯುತ್ತಿದೆ ಎಂಬುದನ್ನು ತೋರಿಸಲಿಕ್ಕೆ ಸಾಕು. ವಿದೇಶಿ ನೇರ ಬಂಡವಾಳ, ಶಿಕ್ಷಣ ಕ್ಷೇತ್ರದಲ್ಲಿ ಹರಿದು ಬರುತ್ತಿರುವುದರಿಂದ ವಿದೇಶಿ ಕಾಲೇಜುಗಳು ಬೆಂಗಳೂರಿನಲ್ಲಿ ನಾಯಿಕೊಡೆಗಳಂತೆ ಹುಟ್ಟುತ್ತಿವೆ. ಅವುಗಳ ಪ್ರವೇಶ ಮತ್ತು ನಿಯುಕ್ತಿ ಮತ್ತು ಪಠ್ಯಕ್ರಮ ಪ್ರತ್ಯೇಕವಾಗಿದೆ. ಇದರ ಪರಿಣಾಮವಾಗಿ ಈ ಕಾಲೇಜುಗಳಿಂದ ಹೊರಬರುವ ಸಾವಿರಾರು ಪದವೀಧರರು ನಿರುದ್ಯೋಗಿಗಳಾಗಿದ್ದಾರೆ. ಈ ವೈಷಮ್ಯವನ್ನು ಬೆಳಸಲು ಏಕೆ ಅವಕಾಶ ಕೊಡಲಾಗುತ್ತಿದೆ?

– ದಾಮೋದರ್ ಅಗರ್‌ವಾಲ್

ಸ್ವತಂತ್ರ ಭಾರತದಲ್ಲಿ ಬಂಧಿತವಾಗುತ್ತಿರುವ ಮೌಲ್ಯಗಳು !

– ಸುರೇಂದ್ರ ಕೌಲಗಿ

ಭಾರತ ದೇಶಕ್ಕೇನೋ ಸ್ವಾತಂತ್ರ ಬಂದು ಅರವತ್ತು ವರ್ಷಗಳಾದವು. ಅಂದರೆ ದೇಶ ತನ್ನ ಪ್ರೌಢಾವಸ್ಥೆಯನ್ನು ದಾಟಿ ಹಿರಿಯ ನಾಗರಿಕನ ಅವಸ್ಥೆಗೆ ತಲುಪಿದೆ. ಜೊತೆಗೆ ಭಾರತೀಯರ ಸ್ವಾತಂತ್ರ್ಯ ಜೀವನ ಅಪಮೌಲ್ಯಗೊಳ್ಳುತಿರುವಂತೆಯೂ ಅನುಭವವಾಗುತ್ತಿದೆ. ಮೌಲ್ಯಕ್ಕೆ ಸಂಬಧಿಸಿದ ಮಾತು ನಿರಾಶಾವಾದಿಯ ಮಾತು ಎಂಬ ಟೀಕೆಗೆ ಒಳಪಡುವ ಸಾಧ್ಯತೆಯಿದೆ. ಏಕೆಂದರೆ ಭಾರತ ಸ್ವತಂತ್ರ್ಯಗೊಂಡ ಮೇಲೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಅದು ಸಾಧಿಸಿರುವ ಪ್ರಗತಿಯಾಗಲಿ, ಅಭಿವೃದ್ಧಿಯಾಗಲಿ ಮೂಗಿನ ಮೇಲೆ ಬೆರಳನ್ನಿಟ್ಟು ನೋಡುವಷ್ಟರ ಮಟ್ಟಿಗೆ ಆಗಿದೆಯೆಂದು ಹೇಳುವವರ ಸಂಖ್ಯೆ ಕಡಿಮೆಯೇನಿಲ್ಲ. ಹಾಗೇಯೇ, ಭಾರತ ದೇಶದ ಉನ್ನತಿಯನ್ನು ಕಂಡು ಹೊಟ್ಟೆಕಿಚ್ಚು ಪಡುವ ದೇಶಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳೂ ಇವೆಯೆಂಬ ಮಾತೂ ಸಹ ಕೇಳಿ ಬರುತ್ತದೆ. ಅಲ್ಲದೆ ಈಗ ತಾನೆ ರಾಷ್ಟ್ರಪತಿ ಸ್ಥಾನದಿಂದ ನಿರ್ಗಮಿಸಿದ ಕನಸುಗಾರ ಅಬ್ದುಲ್ ಕಲಾಂರವರು ಪ್ರಚುರ ಪಡಿಸುತ್ತಿದ್ದ ೨೦೨೦ರ ಹೊತ್ತಿಗೆ ಭಾರತ ಪೂರ್ಣ ಪ್ರಮಾಣದ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕೆಂಬ ಮಾತನ್ನು ಬಹುವಾಗಿ ಪುರಸ್ಕರಿಸುವ ಯುವ ಪಡೆಯೇ ದೇಶದಾದ್ಯಂತ ಸೃಷ್ಟಿಯಾಗಿದೆ. ಅಲ್ಲದೆ, ನಿರಾಶಾವಾದಿ– ಆಶಾವಾದಿಗಳ ಮನೋ ಭೂಮಿಕೆಯನ್ನು ಚಿತ್ರಿಸುವ "ಖಾಲಿ ಲೋಟ, ಅರ್ಧ ತುಂಬಿದ ಲೋಟ"ದ ಉದಾಹರಣೆಯೂ ಜನಜನಿತವಾಗಿದೆ. ಇಂಥ ವಿಚಾರಗಳು ಗಾಳಿಯಲ್ಲಿ ಹರಿದಾಡುತ್ತಿರುವಾಗ ಸ್ವತಂತ್ರ ಭಾರತದಲ್ಲಿ ಮೌಲ್ಯಗಳು ಬಂಧಿತಗೊಳ್ಳುತ್ತಿವೆ ಎಂದು ಹೇಳಿದರೆ ಆ ಮಾತಿನ ಗತಿ ಏನಾಗುತ್ತದೆಂಬುದನ್ನೂ, ಆ ಮಾತನ್ನು ಹೇಳುವ ವ್ಯಕ್ತಿಯನ್ನು ಇಂದಿನ ಸಮಾಜ ಯಾವ ದೃಷ್ಟಿಯಿಂದ ನೋಡುತ್ತದೆಂಬುದನ್ನೂ ಊಹಿಸಿಕೊಳ್ಳವುದು ಸಂಬಂಧಿಸಿದ ವ್ಯಕ್ತಿಗಳಿಗೆ ಸೇರಿದ್ದು. ಆದರೆ ಊಟವೂ ಸಹ ವಿಷವಾಗುತ್ತದೆಂಬ ಅನುಭವದ ಹಿನ್ನೆಲೆಯಲ್ಲಿ "ಸ್ವತಂತ್ರ ಭಾರತದಲ್ಲಿ ಮೌಲ್ಯಗಳು ಬಂಧಿತವಾಗುತ್ತಿವೆ" ಎಂದು ಹೇಳಿದಾಗ ಸ್ವಲ್ಪ ಮಟ್ಟಿಗಾದರೂ ಚಿಂತಕರ ಸಮರ್ಥನೆ ಸಿಗುತ್ತದೆ. "ಬಿಳಿ ಬಣ್ಣದ್ದೆಲ್ಲ ಹಾಲಲ್ಲ, ಹೊಳೆಯುವುದೆಲ್ಲಾ ಚಿನ್ನವಲ್ಲ" ಎಂಬ ಗಾದೆಯ ಮಾತೂ ಸಹ ನೆರವಿಗೆ ಬರಬಹುದು. ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ ಎಂದು ಭಾವಿಸಿ ನಾವು ನಮ್ಮ ಸ್ವತಂತ್ರ ಭಾರತದ ಇಂದಿನ ಸಮಾಜ ಜೀವನದ ಓಘ ಯಾವ ದಿಕ್ಕಿನತ್ತ ಹೊರಟಿದೆ ಎಂದು ನೋಡಿದರೆ ಮೌಲ್ಯಗಳ ಬಂಧನವಾಗುತ್ತಿದೆ ಎಂದು ಯಾರಿಗಾದರೂ ಅನಿಸದೆ ಇರುವುದಿಲ್ಲ. ಈ ಓಘದ ಥಳಕಿನ ಹಿಂದೆ ಇರುವ ಕರಾಳ ಮುಖವನ್ನು ನಮ್ಮ ಜನತೆ ನಿಧಾನವಾಗಿ ಅರಿತುಕೊಳ್ಳುತ್ತಿದೆ. ಈ ಅನಿಸಿಕೆ ಸಾಮಾನ್ಯ ರೈತನಿಂದ ಹಿಡಿದು ಚಂದ್ರಯಾನ ಯೋಜನೆಯ ಮುಖ್ಯಸ್ಥನ ವರೆಗೆ; ಶಾಲಾ ವಿದ್ಯಾರ್ಥಿಯಿಂದ ಹಿಡಿದು ವಿಶ್ವವಿದ್ಯಾನಿಲಯದ ಮುಖ್ಯಸ್ಥರ ವರೆಗೆ; ಗ್ರಾಮ ಪಂಚಾಯತಿಯ ಅಧ್ಯಕ್ಷನಿಂದ ಹಿಡಿದು; ಲೋಕಸಭಾ ಸ್ಪೀಕರ್‌ವರೆಗೆ;

ಸಂತೆಯಲ್ಲಿ ಬೀಗ ರಿಪೇರಿ ಮಾಡುವವನಿಂದ ಹಿಡಿದು ದೇಶದ ದೊಡ್ಡ ಕೈಗಾರಿಕೆಗಳ ಪ್ರಧಾನ ಅಧಿಕಾರಿಯವರೆಗೆ, ಹೊರ ಆರಕ್ಷಠಾಣೆಯ ಪೇದೆಯಿಂದ ಹಿಡಿದು ದೊಡ್ಡ ಸೈನ್ಯಾಧಿಕಾರಿಯವರೆಗೆ; ಗ್ರಾಮ ಪಂಚಾಯತಿಯಲ್ಲಿಯ ಓರ್ವ ಗುಮಾಸ್ತನಿಂದ ಹಿಡಿದು ವಿಧಾನಸೌಧದಲ್ಲಿರುವ ಹಿರಿಯ ಅಧಿಕಾರಿಯವರೆಗೆ; ತಾಲ್ಲೂಕು ಮಟ್ಟದ ನ್ಯಾಯಾಧೀಶನಿಂದ ಹಿಡಿದು ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರವರೆಗೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಜೀವನದಲ್ಲಿ ಮೌಲ್ಯಗಳ ಹ್ರಾಸವಾಗುವಿಕೆಯ ಬಗ್ಗೆ ತಮ್ಮ ಚಿಂತೆಯನ್ನು ವ್ಯಕ್ತಪಡಿಸದೇ ಇಲ್ಲ.

ಇನ್ನು ಮೌಲ್ಯಗಳೆಂದರೇನು ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಜೀವನದಲ್ಲಿಯ ಮೌಲ್ಯಗಳು ಟಂಕಶಾಲೆಯಲ್ಲಿ ತಯಾರಾಗುವ ಹಣದ ಮೌಲ್ಯಗಳಂತೆ ನಿಖರವಾಗಿಲ್ಲ; ಅಲ್ಲದೆ ಅವು ಟಂಕಶಾಲೆಯಿಂದ ಹೊರಬರುವಂತೆ ಮೌಲ್ಯಗಳನ್ನು ಹೊರಹಾಕುವ ಯಾವ ಕಮ್ಮಟವೂ ಇಲ್ಲ. ಆದ್ದರಿಂದ ಮೌಲ್ಯ ಎಂಬ ಶಬ್ದವೇ ಅಮೂರ್ತವೂ ಅಸ್ಪಷ್ಟವೂ, ಅತೌಲನಿಕವೂ ಆಗಿರುವುದರಿಂದ "ಮೌಲ್ಯಗಳು ಬಂಧನವಾಗುತ್ತಿದೆ" ಎಂಬ ಹೇಳಿಕೆ ಸೂತ್ರ ಕಿತ್ತು ಹೋದ ಗಾಳಿಪಟದಂತೆ ಎತ್ತಲೆತ್ತಲೋ ಹೋಗುವ ಸಂಭವ ಇದೆ. ಆದರೆ ವಿಚಿತ್ರವಾದ ಅನುಭವವೇನೆಂದರೆ ದೇಶದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರೆಲ್ಲ ಜೀವನದ ಮೌಲ್ಯಗಳು ಅಪಮೌಲ್ಯಗೊಳ್ಳುತ್ತಿರುವ ಬಗ್ಗೆ ತಮ್ಮ ಖೇದ ವ್ಯಕ್ತಪಡಿಸುತ್ತಲೇ ಇರುತ್ತಾರೆ. ಸಾಮಾನ್ಯ ಜನ ಮತ್ತು ಜವಾಬ್ದಾರಿಯುತ ಜನ ಹೀಗೆ ಖೇದಿಸುವಾಗ ಅವರ ಮನಸ್ಸಿನಲ್ಲಿ ಮೌಲ್ಯ ಕುರಿತಾದ ವ್ಯಾಖ್ಯೆ ಏನೆಂಬುದು ಬಹಿರಂಗಗೊಳ್ಳುವುದಿಲ್ಲ. ಅದೆಲ್ಲವೂ ಅವರವರ ಅಂತರಂಗದಲ್ಲಿಯ ವ್ಯಾಖ್ಯೆಯಾಗಿಯೇ ಉಳಿದುಬಿಡುತ್ತದೆ. ಆದ್ದರಿಂದ ಮೌಲ್ಯಗಳ ಹಾಳಾಗುವಿಕೆಯ ಮಾತನಾಡುವುದು ಒಂದು ರೀತಿಯಲ್ಲಿ ತನ್ನ ನೆರಳಿಗೆ ಅಂಜಿ ಅದನ್ನು ತಾನೇ ಕೋಲಿನಿಂದ ಹೊಡೆದಂತಾಗುತ್ತದೆ.

ಜೀವನವು ಬಹಳ ಸಂಕೀರ್ಣವಾಗಿರುವುದರಿಂದ ಎಷ್ಟು ಜನ ಭಾರತೀಯರಿದ್ದಾರೋ ಅಷ್ಟು ರೀತಿಯಲ್ಲಿ ಜೀವನದ ಮೌಲ್ಯಗಳ ಬಗ್ಗೆ ಮಾತುಗಳು ಬರಲು ಸಾಧ್ಯವಿದೆ. ಹಾಗಾಗಿ ಒಬ್ಬ ಮೌಲ್ಯಗಳ ನಷ್ಟದ ಬಗ್ಗೆ ನಿಟ್ಟುಸಿರು ಬಿಟ್ಟರೆ ಇನ್ನೊಬ್ಬ ಸಂತೋಷಿಸಬಹುದು. ಜೀವನದ ಮೌಲ್ಯವನ್ನು ಪ್ರತಿಯೊಬ್ಬರೂ ತಮ್ಮ-ತಮ್ಮ ನೆಲೆಗಟ್ಟಿನ ಮೇಲೆ ನಿಂತು ಅರ್ಥಮಾಡಿಕೊಳ್ಳುತ್ತಾರೆ, ಹೇಳುತ್ತಾರೆ ಮತ್ತು ಪಾಲಿಸುತ್ತಾರೆ. ಅಮೇರಿಕದ ಅಧ್ಯಕ್ಷ ಜಾರ್ಜ್ ಬುಷ್‌ನ ಜೀವನ ಮೌಲ್ಯವೂ, ಈಗ ಪಾಕಿಸ್ತಾನದಲ್ಲಿ ಅವಿತು ಕುಳಿತಿರುವ ತಾಲೀಬಾನ್ ಮುಖಂಡ ಬಿನ್ ಲಾಡೆನ್‌ನ ಜೀವನ ಮೌಲ್ಯವೂ ಈಗ ಸದ್ಯಕ್ಕಂತೂ ಉತ್ತರ-ದಕ್ಷಿಣಾಭಿಮುಖವಾಗಿವೆ. ಸದ್ಯಕ್ಕೆ ಹತ್ತಿರವಾಗುವ ಸಾಧ್ಯತೆಯೂ ಇಲ್ಲ.

ಈಗ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಆಡಳಿತದ ಕರ್ಣಧಾರರು ಅಭಿವೃದ್ಧಿಯ ಬಗ್ಗೆ ಇಟ್ಟುಕೊಂಡಿರುವ ಮೌಲ್ಯಗಳೂ, ಅಭಿವೃದ್ಧಿಯ ದೆಸೆಯಿಂದ ಉಚ್ಚಾಟಿತರಾಗಿ ಕಂಗಾಲಾಗಿರುವ ಪ್ರಪಂಚದ ಹತ್ತು ಕೋಟಿ ನಿರಾಶ್ರಿತರ ಮತ್ತು ಭಾರತದಲ್ಲಿಯ ಜಿಂದೂವರೆ

ಕೋಟಿ ನಿರಾಶ್ರಿತರ ಮೌಲ್ಯಗಳೂ ಖಂಡಿತವಾಗಿ ಬೇರೆ-ಬೇರೆ ಇರಲೇಬೇಕು.

ಮೌಲ್ಯಗಳ ವಿಚಾರ ಇಷ್ಟೊಂದು ಗೊಂದಲಮಯವಾಗಿರುವಾಗ "ಸ್ವತಂತ್ರ ಭಾರತದಲ್ಲಿ ಮೌಲ್ಯಗಳು ಬಂಧಿತವಾಗುತ್ತಿವೆ" ಎಂಬ ಹೇಳಿಕೆಯನ್ನು ಸಮರ್ಥಿಸಿ ಹೇಳುವುದು ಗೊಂಡಾರಣ್ಯದಲ್ಲಿಯ ಜೀವನವೇ ಸರಿ. ಜೀವನದ ಮೌಲ್ಯಗಳ ಅವನತಿಯನ್ನು ತಿಳಿದ ಶ್ರೇಷ್ಠ ಚಿಂತಕ ಗುಂಡಪ್ಪನವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಒಂದೆಡೆ ಹೀಗೆ ಹೇಳಿದ್ದಾರೆ,

"ಹಳೆಯ ಭಕ್ತಿ ಶ್ರದ್ಧೆಗಳೆಲ್ಲ ಅಳಿಸಿಹೋಗಿಪೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳಪಂ
ಪಳಗಿದ್ದ ಮನೆಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ - ಮಂಕುತಿಮ್ಮ

ನಾಲ್ಕು ಸಾಲುಗಳ ಈ ನುಡಿ ಮೌಲ್ಯ, ಮೌಲ್ಯದ ಅವನತಿ, ಮೌಲ್ಯದ ವ್ಯಾಖ್ಯೆ ಮುಂತಾದ ವಿಚಾರಗಳ ಬಗ್ಗೆ ಇರುವ ಗೊಂದಲ, ಅಸ್ಪಷ್ಟತೆ 'ಇತ್ಯಾದಿಗಳನ್ನು ಬಹು ಮಾರ್ಮಿಕವಾಗಿ ಪ್ರಕಟಿಸುತ್ತವೆ. ಇಲ್ಲಿ ಮುಖ್ಯವಾದದ್ದೇನೆಂದರೆ ತಳಮಳದ ದುಃಸ್ಥಿತಿಯಿಂದ ಲೋಕ ಹೊರಬರಬೇಕಾಗಿದೆ ಎನ್ನುವುದು.

ಮೌಲ್ಯದ ಅವನತಿಯಾಗುತ್ತಿದೆ ಎಂದು ಯಾರೇ ಹೇಳಲಿ ಅವರು ಅಭಿವೃದ್ಧಿಯ ವಿರೋಧಿ ಎಂದು ಹಣೆಪಟ್ಟಿ ಪಡೆಯುವ ಸಾಧ್ಯತೆ ಇದೆ. ಏಕೆಂದರೆ ಹತ್ತೊಂಭತ್ತನೇ ಶತಮಾನದಲ್ಲಿ ಪ್ರಾರಂಭವಾದ ವೈಜ್ಞಾನಿಕ ಮತ್ತು ತಾಂತ್ರಿಕ ಮತ್ತು ರಾಜಕೀಯ ಬೆಳವಣಿಗೆಗಳೊಂದಿಗೆ ಜೀವನದ ವಮೌಲ್ಯವನ್ನು ಭೌತಿಕ ಪ್ರಗತಿಯೊಂದಿಗೆ ಸಮೀಕರಣಗೊಳಿಸಲಾಗಿದೆ. ಮೌಲ್ಯವೆಂದರೇನೇ ಅಭಿವೃದ್ಧಿ; ಅಭಿವೃದ್ಧಿ ಎಂದರೇನೇ ಮೌಲ್ಯವೆಂದು ಪರಿಭಾವಿಸಲಾಗುತ್ತಿದೆ. ಆದ್ದರಿಂದ ಇಂದು ಸ್ವತಂತ್ರ ಭಾರತದಲ್ಲಿ ಮೌಲ್ಯಗಳ ಬಂಧನವಾಗುತ್ತಿದೆ ಎಂದು ಹೇಳಿದರೆ ಅದಕ್ಕೆ ಪ್ರತಿಯಾಗಿ, ಹಾಗಾದರೆ ದೇಶ ಭೌತಿಕ ಪ್ರಗತಿ ಸಾಧಿಸಬೇಡವೇ, ಹಿಂದಿನಂತೆ ಇಂದೂ ಭಾರತವು "ಸೆಗಣಿಯ ಯುಗ"ದಲ್ಲಿಯೇ ಇರಬೇಕೆ, ವೇಗವಾಗಿ ಬೆಳೆಯುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಲಾಭವನ್ನು ಜನಕೋಟಿ ಪಡೆಯಬೇಡವೇ, ಎಲ್ಲರಿಗೂ ಸಮಾನ ಅವಕಾಶ ಎಲ್ಲರೂ ಸಮಾನ ಎಂಬ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುತ್ತಿರುವ ಕೈಗಾರಿಕರಣವನ್ನು ತ್ಯಜಿಸಬೇಕೆ, ಜಾಗತೀಕರಣದ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲರನ್ನೂ ಸಬಲರನ್ನಾಗಿ ಮಾಡುವ ಇಂಗ್ಲಿಷ್ ಭಾಷೆಯನ್ನು ಕಲಿಯುವುದು ತಪ್ಪೇ ಎಂಬೀ ಮುಂತಾದ ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಮೇಲ್ಕಾಣಿಸಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಕೊಡುವುದು ಕಠಿಣ ಪ್ರಸಂಗವೇ ಹೌದು. ಆದರೆ ನಾವಿಲ್ಲಿ ಮೌಲ್ಯದ ಬಗ್ಗೆ ಮೇಲೆ ಹೇಳಲಾದ ಸಮೀಕರಣವನ್ನು ಬದಲಾಯಿಸಿ ನೋಡಿದಾಗ ನಮ್ಮ ಆಧುನಿಕ ಸಮಾಜದ ಚಿತ್ರ ಬೇರೆಬಗೆಯಾಗಿ ಕಾಣುತ್ತದೆ.

ಮೌಲ್ಯ ಎಂದರೆ ಕೇವಲ ಭೌತಿಕ ಅಭಿವೃದ್ಧಿಗೆ ಮಾತ್ರ ಸಂಬಂಧಿಸಿದ್ದು ಎಂದು

ಭಾವಿಸದೆ ಅದು ಮಾನವ ಜೀವನಕ್ಕೆ ಮೂಲಭೂತವಾಗಿ ಆಧಾರವಾಗಿರುವ, ಮಾನವ ಸಮಾಜದ ಜೀವನ ಚಕ್ರವನ್ನು ಸುಸಂಬದ್ಧವಾಗಿ ತಿರುಗಿಸುವ, ಸಮಾಜದಲ್ಲಿ ಅಂದರೆ ಕುಟುಂಬ, ಸಂಘ, ಸರ್ಕಾರ ಮುಂತಾದೆಡೆಯೆಲ್ಲೆಲ್ಲ ಮಾನವ ಸಂಬಂಧಗಳಿಗೆ ನ್ಯಾಯೊಚಿತ ಮನ್ನಣೆಸಿಗುವ ನೈತಿಕತೆಗೂ ಸಂಬಂಧಿಸಿದ್ದು ಎಂದು ಭಾವಿಸಿದರೆ ಆಗ "ಸ್ವತಂತ್ರ ಭಾರತದಲ್ಲಿ ಮೌಲ್ಯಗಳ ಬಂಧನವಾಗುತ್ತಿದೆ" ಎಂಬ ಹೇಳಿಕೆಯ ಹಿಂದಿರುವ ಭಾವನೆ ಕೊಂಚಾದರೂ ಅರ್ಥವಾಗಬಹುದು.

ಈಗ ಜೀವನದ ಪ್ರಧಾನ ಮೌಲ್ಯಗಳಾವವು ಎಂದು ಈ ಕೆಳಗಿನಂತೆ ಆದ್ಯತೆಯ ಆಧಾರದ ಮೇಲೆ ಪಟ್ಟಿ ಮಾಡೋಣ. ಅದು ೧) ಅಹಿಂಸೆ ೨) ಸತ್ಯ ೩) ಅಸ್ತೇಯ ೪) ಬ್ರಹ್ಮಚರ್ಯ ೫) ಅಸಂಗ್ರಹ ೬) ಶರೀರಶ್ರಮ ೭) ಅಸ್ವಾದ ೮) ಸರ್ವತ್ರ ನಿರ್ಭಯತೆ ೯) ಸರ್ವಧರ್ಮ ಸಮಾನತೆ ೧೦) ಸ್ವದೇಶಿ ೧೧) ಸ್ಪರ್ಶಭಾವನೆ ಮೇಲ್ಕಾಣಿಸಿದ ಮೌಲ್ಯಗಳ ಬಗ್ಗೆ ಯಾರದೂ, ಯಾವ ವಿಧದಲ್ಲೂ ಆಕ್ಷೇಪಣೆ ಸಾಮಾನ್ಯವಾಗಿ ಇರಲಾರದು. ಏಕೆಂದರೆ ನಮ್ಮ ಭಾರತ ದೇಶದ ಮಟ್ಟಿಗೆ ಹೇಳುವುದಾದರೆ ನಮ್ಮ ಪ್ರಜಾಸತ್ತಾತ್ಮಕ ಸಮಾಜವಾದಿ, ಧರ್ಮನಿರಪೇಕ್ಷ ಗಣರಾಜ್ಯದ ಎಲ್ಲ ಆಶೋತ್ತರಗಳು ಈ ಮೌಲ್ಯಗಳ ಸಾಧನೆಯ ಮೇಲೆ ನಿಂತಿದೆ. ಈ ಮೌಲ್ಯಗಳೇ ನಮ್ಮ ಸಂವಿಧಾನದ ಆಧಾರ ಸ್ತಂಭಗಳೂ ಆಗಿವೆ.

ಮೇಲಿನ ವಿಚಾರಗಳ ಆಧಾರದ ಮೇಲೆ ನಾವು ಮೌಲ್ಯದ ಅರ್ಥವನ್ನ ಅಂಗೀಕರಿಸುವುದಾದರೆ " ಸ್ವತಂತ್ರ ಭಾರತದಲ್ಲಿ ಮೌಲ್ಯಗಳ ಬಂಧನವಾಗುತ್ತಿದೆ" ಎಂಬ ಹೇಳಿಕೆಯ ಸಿಂಧುತ್ವ – ಅಸಿಂಧುತ್ವ ತಾನಾಗಿಯೇ ಮನವರಿಕೆಯಾಗುವುದು.

ನಮ್ಮ ಇಂದಿನ ರಾಷ್ಟ್ರ ಜೀವನದ ಪ್ರತಿಯೊಂದು ಕ್ಷೇತ್ರದ ವಸ್ತುಸ್ಥಿತಿಯನ್ನು ಮೇಲ್ಕಾಣಿಸಿದ ಒಂದೊಂದು ಮೌಲ್ಯದ ಒರೆಗಲ್ಲಿನ ಮೇಲೆ ಉಜ್ಜಿನೋಡಿದಾಗ ನಾವು ಹೊಳೆಯುವುದೆಲ್ಲಾ ಚಿನ್ನವೆಂದು ಯಾವುದನ್ನೆಲ್ಲಾ ಅಂಗೀಕರಿಸಿರುವೆವೋ ಅದೆಲ್ಲಾ ಚಿನ್ನವಲ್ಲ ಅಪ್ಪಟ ಸೀಸ ಎಂದು ಗೊತ್ತಾಗುವುದು.

ಎಲ್ಲ ಕ್ಷೇತ್ರಗಳನ್ನೂ, ಎಲ್ಲ ಮೌಲ್ಯಗಳ ಆಧಾರದ ಮೇಲೆ ಪರೀಕ್ಷಿಸ ಹೊರಟರೆ "ಆಡಾಡ್ತ ಅಡವಿ ಹೊಕ್ಕರು" ಎಂಬ ನಾಣ್ನುಡಿಯಂತೆ ನಮ್ಮ ಪರಿಸ್ಥಿತಿ ಆಗುವುದು. ಆದ್ದರಿಂದ ಮೇಲಿನ ಮೌಲ್ಯಗಳ ಪಟ್ಟಿಯಲ್ಲಿ ಮೊದಲೆರಡು ಮೌಲ್ಯಗಳಾದ ಅಹಿಂಸೆ ಮತ್ತು ಸತ್ಯಗಳನ್ನು ಇಟ್ಟುಕೊಂಡು ಸ್ವಾತಂತ್ರದ ಅರವತ್ತೊಂದನೇ ಸಂವತ್ಸರವನ್ನು ಆಚರಿಸುತ್ತಿರುವ ನಮ್ಮ ರಾಷ್ಟ್ರ ಜೀವನದ ಏಳುಬೀಳುಗಳು ಸುಖದುಃಖಗಳನ್ನು ಪರೀಕ್ಷಿಸಿದಲ್ಲಿ ಹೇಗೆ ನಾವು ಭಾರತೀಯರು ಜೀವನದ ಮೂಲ ದ್ರವ್ಯಗಳೆಂದು ಇರುವ ಮೌಲ್ಯಗಳನ್ನು ವ್ಯವಸ್ಥಿತವಾಗಿ ಬಂಧಿಸಿಡುತ್ತಾ ಹೋಗುತ್ತಿದ್ದೇವೆಂದು ಸೂರ್ಯನ ಬೆಳಕಿನಷ್ಟು ಸ್ಪಷ್ಟವಾಗಿ ಗೋಚರಿಸುತ್ತದೆ. ಆಗಲಾದರೂ "ಸ್ವತಂತ್ರ ಭಾರತದಲ್ಲಿ ಮೌಲ್ಯಗಳು ಬಂಧಿತವಾಗುತ್ತಿವೆ" ಎಂಬ ಹೇಳಿಕೆಯ ಹಿಂದಿನ ಭಾವನೆ ಅರ್ಥವಾಗದೇ ಇರದು. ಅಂತೆಯೇ ಮುಖ ಪುಟದ ಚಿತ್ರ ಇದಕ್ಕೆ ಸಂಕೇತವಾಗಿದೆಯೆಂದೂ ಅನಿಸದೆ ಇರದು.

ಶಾಂತಿನಿಕೇತನ ಮತ್ತು ಸೇವಾಗ್ರಾಮ

- ಗುರುದಯಾಳ್ ಮಲ್ಲಿಕ್

ಆಧುನಿಕ ಭಾರತದ ಆದರ್ಶವಾದ ಮತ್ತು ಆಶೋತ್ತರಗಳು ಸಾಮಾನ್ಯವಾಗಿ ಹೇಳುವುದಾದರೆ ಎರಡು ಸಂಕೇತಗಳಲ್ಲಿ ಪ್ರಕಟಗೊಂಡಿವೆ: ಶಾಂತಿನಿಕೇತನ ಮತ್ತು ಸೇವಾಗ್ರಾಮ. ಈ ಎರಡೂ ಸಂಸ್ಥೆಗಳು ೧೯ನೇ ಶತಮಾನದ ಕೊನೆ ಭಾಗದಲ್ಲಿದ್ದ ಪಾಶ್ಚಿಮಾತ್ಯರ ಮೌಲ್ಯಗಳ ಪ್ರತಿಭಟನೆಯ ಸಂಕೇತವಾಗಿ ಅಸ್ತಿತ್ವಕ್ಕೆ ಬಂದವು. ಆ ಮೌಲ್ಯಗಳು ವ್ಯಕ್ತಿವಾದ, ಕೈಗಾರಿಕಾವಾದ ಮತ್ತು ಸಾಮ್ರಾಜ್ಯವಾದಗಳಾಗಿದ್ದವು. ಇವು ನಮ್ಮ ದೇಶದ ಆಡಳಿತ ವ್ಯವಸ್ಥೆ ಮತ್ತು ಶಿಕ್ಷಣ ಪದ್ಧತಿಯಲ್ಲಿ ಪ್ರತಿಫಲಿತಗೊಂಡವು. ಶಾಂತಿನಿಕೇತನವು ಶುಕ್ರಗ್ರಹದಂತೆ ಕವಿಯ ಕಲ್ಪನೆಯಿಂದ ಹುಟ್ಟಿತು. ಸಾಲ್‌ಮರಗಳ ಸಾಲುಗಳ ಮಧ್ಯೆ ರವೀಂದ್ರನಾಥ್ ಠಾಗೂರ್‌ರವರು ಯೌವನದ ಪೂರ್ಣ ಪ್ರತಿಭೆಯಲ್ಲಿದ್ದ ಮೂವರು ಬಾಲಕರೊಂದಿಗೆ ಪ್ರಕೃತಿ ಮತ್ತು ಅದರ ನೆರೆಯವರಾದ ಆದಿಮಾನವರ ಸಾನಿಧ್ಯದಲ್ಲಿ ಮರದ ಕೆಳಗೆ ಕುಳಿತ ದಿನವೆ ಅವರು ವೃತ್ತಿಪರ ಶಿಕ್ಷಕನಿಗೆ ಸಮನ್ವಯತೆಯ ಮುದ್ರೆಯುಳ್ಳ ಬೋಧನೆಯ ಸಿದ್ಧಾಂತವನ್ನು ಕಾಣಿಕೆಯನ್ನಾಗಿ ಕೊಟ್ಟರು. ಸೇವಾಗ್ರಾಮ ಅಥವಾ ದಕ್ಷಿಣ ಆಫ್ರಿಕಾದಲ್ಲಿಯ ಫೀನಿಕ್ಸ್ ಆಶ್ರಮ ಅಥವಾ ಸಾಬರಮತಿ ಆಶ್ರಮಗಳು ಅರ್ಥಶಃ ಇಟ್ಟಿಗೆಯ ಮೇಲೆ ಇಟ್ಟಿಗೆಯನ್ನಿಟ್ಟು ನಿರ್ಮಾಣಗೊಂಡವು. ಪ್ರಾಮಾಣಿಕ ಶರೀರಶ್ರಮವು ಮಾನವನ ಅಸ್ತಿತ್ವಕ್ಕೆ ಮೂಲತತ್ವವೆಂದು ನಂಬಿದ್ದ ಓರ್ವ ಕುಶಲಕರ್ಮಿಯು ಅವುಗಳನ್ನು ಕಟ್ಟಿದನು. ಅಂಥ ಶ್ರಮವು ಮನುಷ್ಯನಿಗೆ ಆತ್ಮಗೌರವವನ್ನೂ ಆತ್ಮ ಸ್ಥೈರ್ಯವನ್ನೂ ತಂದುಕೊಡಬಲ್ಲವೆಂದು ವಿಶ್ವಾಸಪೂರ್ಣವಾಗಿ ಆತ ತಿಳಿದಿದ್ದ.

ಕವಿಯಲ್ಲಿರುವಂಥ ಜೀವನದ ಕನಸನ್ನು ಅವರು ತಮ್ಮ ವನಾಶ್ರಮದಲ್ಲಿ ಅನುಷ್ಠಾನಗೊಳಿಸಬೇಕೆಂಬ ಗುರಿಯನ್ನು ಹೊಂದಿದ್ದರು. ಆದರೆ ಪರಿವರ್ತನೆಗೊಳ್ಳುವ ಪರಿಸ್ಥಿತಿಗೂ ಹೊಂದಿಕೊಂಡರು. ಪ್ರತಿಯೊಬ್ಬರ ಹೃದಯದಲ್ಲೂ ಸ್ವಭಾವಸಿದ್ಧವಾಗಿರುವ ಏಕತೆಯ ಸಹಜ ಬೆಳವಣಿಗೆ ಅಡ್ಡಿ ಪಡಿಸುವಂಥವುಗಳನ್ನು ಅಧ್ಯಯನ, ಸ್ವಯಂ ಶಿಸ್ತು, ಕಾವ್ಯದ ಮೂಲಕ ಇಲ್ಲದಂತೆ ಮಾಡಬಹುದು ಎಂದು ರವೀಂದ್ರನಾಥ್ ನಂಬಿದ್ದರು. ಗಾಂಧೀಜಿಯವರನ್ನು ರೈತನೆಂದು ಉಪಮೇಯಾತ್ಮಕವಾಗಿ ಕರೆಯುಬಹುದು. ತನ್ನ ಅತ್ಯಂತ

ವ್ಯಾವಹಾರಿಕ ಮತ್ತು ನೈಜ ಸಿದ್ಧಾಂತವಾದ 'ನನಗೊಂದು ಹೆಜ್ಜೆ ಸಾಕು' ಎಂಬುದರ ಮೂಲಕ ಪ್ರತಿಯೊಂದರ ಗುಣಧರ್ಮವನ್ನೂ ಪ್ರಜ್ಞಾಪೂರ್ವಕವಾಗಿ ಕೃಷಿಗೊಳಿಸುವ ಮೂಲಕ ತನ್ನಲ್ಲಿಯ ಅಹಂ ಅನ್ನು ಹಂತಹಂತವಾಗಿ ಶೂನ್ಯಗೊಳಿಸುತ್ತ ಎಲ್ಲ ವ್ಯಕ್ತಿಗಳಲ್ಲಿಯೂ ಸಾಮಾನ್ಯವಾಗಿರುವ ಭಾವನೆಯನ್ನು ಮುಟ್ಟಬಹುದು ಎಂದು ಗಾಂಧೀ ಭಾವಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ರವೀಂದ್ರರದು ಅನುಭಾವವಾದವಾದರೆ ಇನ್ನೊಬ್ಬರದು ಸನ್ಯಾಸತ್ವ. ವ್ಯಕ್ತಿಗತ ಅಥವಾ ಸಾಮೂಹಿಕ ನೆಲೆಯಲ್ಲಿ ಆತ್ಮೋನ್ನತಿಗೆ ಕಠಿಣತಮ ಪರಿಶ್ರಮ ಅಗತ್ಯವೆಂಬುದು ಸ್ಪಷ್ಟವಾಗಿಯೆ ಇದೆ. ಏಕೆಂದರೆ ನಮಗೆ ಸ್ವಾತಂತ್ರ್ಯವೂ ಬೇಕು; ಶಾಸನವು ಬೇಕು, ದೃಷ್ಟಿಯು ಬೇಕು, ಸದ್ಗುಣವೂ ಬೇಕು; ಕಾವಲುಗಾರನು ಬೇಕು, ಕಾರ್ಯಾಗಾರವೂ ಬೇಕು. ಅನುಭವವಾದಿಯು ಬಿಸಿಲು ಮತ್ತು ಮಳೆಯಲ್ಲಿ ಬೆಳೆಯುವಂಥ ಹೂವಿದ್ದಂತೆ. ಆದ್ದರಿಂದ ಅವನು ಎಲ್ಲವನ್ನೂ ಸ್ವೀಕರಿಸುತ್ತಾನೆ, ಯಾವುದನ್ನೂ ನಿರಾಕರಿಸುವುದಿಲ್ಲ. ಅನಂತವಾಗಿ ಪ್ರಕಟಗೊಳ್ಳುತ್ತಿರುವ ಜೀವನದ ವೈಭವಕ್ಕೆ ಅವನು ಸಾಕ್ಷಿರೂಪವಾಗಿರುತ್ತಾನೆ.

ಸನ್ಯಾಸಿ ಒಂದು ಬಗೆಯಲ್ಲಿ ಸೇವಕನಿದ್ದಂತೆ. ಅವನು ಪ್ರತಿಯೊಂದು ಪಾತ್ರೆಯನ್ನೂ ಹೊಳೆಯುವವರೆಗೆ ತೊಳೆಯುತ್ತಾನೆ ಅಥವಾ ತನ್ನ ಹೃದಯದ ಇಚ್ಛೆಗನುಗುಣವಾದ ಆತ್ಮದ ಕನಸಿನತ್ತ ಹೋಗಲು ಪ್ರತಿಯೊಂದು ಹೆಜ್ಜೆಗಾಗಿ ಯೋಧನಂತೆ ಹೋರಾಡುತ್ತಾನೆ. ಇಂಗ್ಲೆಂಡಿನ ವೈಚಾರಿಕತೆಯ ಆಶೋತ್ತರಗಳ ಪರಿಣಾಮ ನಮ್ಮ ಕೆಲವೇ ದೇಶವಾಸಿಗಳ ಮೇಲೆ ಆಗಿದ್ದರೂ ಕೂಡ ಅದು ಅವರಲ್ಲಿ ನಿರಾಶಾ ಭಾವನೆಯನ್ನು, ಮೃದುತ್ವವನ್ನು ಮತ್ತು ಒಣಪ್ರತಿಷ್ಠೆಯನ್ನು ತಂದಿತ್ತು. ಹೀಗೆ ನಮ್ಮ ದೇಶದಲ್ಲಿ ನೈತಿಕ ಗುಲಾಮಗಿರಿ ತಲೆಯೆತ್ತಿತ್ತು. ಜನಪ್ರಿಯ ನಡತೆ ಮತ್ತು ಚರ್ಯೆಯನ್ನು ಸುಬದ್ಧವಾಗಿ ನಿಯಂತ್ರಿಸುವಂಥ ಗತಕಾಲದ ಪರಂಪರೆಗಳಿಂದ ಕತ್ತರಿಸಿ ಹಾಕಿತ್ತು. ತಮ್ಮ ಹಿಂದಿನ ತಲೆಮಾರಿನವರಲ್ಲಿದ್ದ ದೇಶವಾಸಿಗಳಂತೆ ಶಾಂತಿನಿಕೇತನದ ಹಾಡುಗಾರ ಮತ್ತು ಸೇವಾ ಗ್ರಾಮದ ನೂಲುಗಾರ ಇಬ್ಬರೂ ಯುವಕರ ದೀನತೆಯ ವಿರುದ್ಧ ಬಂಡಾಯವೆದ್ದರು. ಈ ದೀನತೆಯು ಪಾಶ್ಚಿಮಾತ್ಯ ದೇಶಗಳ ರಾಜಕಾರಣ ಮತ್ತು ಹಣ ಆಧಾರಿತ ನಾಗರೀಕತೆಯ ಕಾರಣದಿಂದ ಉಂಟಾಗಿತ್ತು. ಇದರಿಂದಾಗಿ ಕವಿ ಮತ್ತು ನೂಲುಗಾರ ತಮ್ಮ-ತಮ್ಮ ಸುಖಜೀವನ ಹಾಗು ಹಣ ಸಂಪಾದನೆಯ ವೃತ್ತಿಯನ್ನು ತ್ಯಾಗಮಾಡಬೇಕಾಯಿತು. ಕವಿ ಶ್ರೀಮಂತಿಕೆಯ ತನ್ನ ಬೆಳವಣಿಗೆಯ ಮತ್ತು ಚಟುವಟಿಕೆಯ ವಾತಾವರಣದಲ್ಲಿ ಸುಂದರತೆಯ ಮುರಳಿಯನ್ನು

ಕರ್ತವ್ಯದ ಖಡ್ಗಕ್ಕಾಗಿ ವಿನಿಮಯಮಾಡಿಕೊಂಡರೆ, ವಕೀಲನು ನ್ಯಾಯಾಲಯದಿಂದ ಹೊರಬಂದನು. ಹಾಗೆ ಮಾಡುವುದರ ಮೂಲಕ ಚಿನ್ನದ ಮೊಟ್ಟೆ ಇಡುವ ವೃತ್ತಿಯನ್ನು ತ್ಯಜಿಸಿದನಲ್ಲದೆ ಗಟ್ಟಿಯಾದ ಬಂಜರು ಭೂಮಿಯ ಉಳುಮೆಯನ್ನು ಕೈಗೆತ್ತಿಕೊಂಡ. ಇಬ್ಬರಿಗೂ ಪ್ರೇರಣೆ ದೊರೆತದ್ದು ತ್ಯಾಗದ ಮನೋಭಾವನೆಯಿಂದ. ಇವರನ್ನು ಗೌತಮ ಬುದ್ಧ ಮತ್ತು ಏಸುಗೆ ಹೋಲಿಸಬಹುದು. ಬುದ್ಧ ಮತ್ತು ಏಸು ತಮಗೆ ದೊರೆಯಬಹುದಾಗಿದ್ದ 'ಸಾಮ್ರಾಜ್ಯಗಳನ್ನು' ವಿಶಾಲ ಅನಾಥ ಮಾನವಕುಲದ ಸೇವೆಗಾಗಿ ಬಿಟ್ಟುಕೊಟ್ಟರು. "ಮಾನವಕುಲವಷ್ಟೆ ಅಲ್ಲ, ಇಡೀ ಜೀವಸದ ವಿಕಾಸ ಮತ್ತು ಮುನ್ನಡೆಗೆ ತ್ಯಾಗವೇ ಬೀಜ ಎಂದು ಸನಾತನವೂ ಮತ್ತು ಋಷಿಗಳೂ ಹೇಳಿದ ಮಾತನ್ನು ಸಾದೋಹರಣವಾಗಿ ತೋರಿಸಿದರು. ರವೀಂದ್ರರು ಹಾಡಿದರು:

"ನಿನ್ನ ಪರಿಚಯವಾದ ಮೇಲೆ ಯಾರೊಬ್ಬರೂ ಪರಕೀಯರಲ್ಲ, ಯಾವ ಬಾಗಿಲೂ ಮುಚ್ಚಿಲ್ಲ, ದೇವರೆ, ನನ್ನ ಪ್ರಾರ್ಥನೆಯನ್ನು ಈಡೇರಿಸು. ಎಲ್ಲರಲ್ಲಿಯೂ ಆಟವಾಡುತ್ತಿರುವ ಅವನ ಸ್ಪರ್ಶದ ಆನಂದ ಎಂದಿಗೂ ತಪ್ಪದಿರಲಿ." – *ಗೀತಾಂಜಲಿ.*

ಆ ಸ್ಪರ್ಶಸುಖವನ್ನು ಕವಿ ಸಾಹಿತ್ಯ, ಕಲೆ, ಶಿಕ್ಷಣ ಮತ್ತು ಗ್ರಾಮಾಭಿವೃದ್ಧಿಯಂಥ ಕ್ಷೇತ್ರಗಳಲ್ಲಿ ಪ್ರಕಾಶಿಸಿದರು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಶಾಂತಿನಿಕೇತನ ಮತ್ತು ಸೇವಾಗ್ರಾಮ ಮಾನವನಲ್ಲಿ ಸಹಜವಾಗಿರುವ ಪರಿಪೂರ್ಣತೆಯ ದಾಹವನ್ನು ತೀವ್ರಗೊಳಿಸಿದವು. ಪರಿಪೂರ್ಣತೆಯ ಅತ್ಯುತ್ತಮ ಮತ್ತು ಸತ್ಯದ ಅಭಿವ್ಯಕ್ತಿ ಭಾವನಾತ್ಮಕವಾಗಿಯೂ ಮತ್ತು ಭೌತಿಕವಾಗಿಯೂ ಇರುವಂಥ ಸರಳತೆ. ಕವಿ ಒಂದೆಡೆ ಹೇಳಿದಂತೆ ಸರಳತೆ ಎಂಬುದು ಪರಿಪೂರ್ಣತೆಯ ದೇಹಶಾಸ್ತ್ರ.

ನಮ್ಮ ಕಾಲದಲ್ಲಿ ಅರ್ಚಕ ವಿಫಲನಾಗಿದ್ದಾನೆ, ದೇವದೂತ ಅವತರಿಸಿಲ್ಲ. ಅವರ ಸ್ಥಳದಲ್ಲಿ ಉದಾತ್ತ ಕವಿಯನ್ನೂ, ನೇಗಿಲಯೋಗಿಯನ್ನೂ ನೋಡಿದ್ದೇವೆ. ಅವರಿಬ್ಬರೂ ಸತ್ಯದ ಮಂದಿರದತ್ತ ಪಯಣಿಸುತ್ತಿದ್ದಾರೆ. ಸತ್ಯದ ದಾರಿಯ ಇಕ್ಕೆಡೆಗಳಲ್ಲಿ ಆನಂದ ಮತ್ತು ತ್ಯಾಗದ ಸಾಲುಮರಗಳಿವೆ. ಕವಿ ಒಂದು ಬಾರಿ ಹೀಗೆ ವಿವರಣೆ ಕೊಟ್ಟಿದ್ದಾರೆ: ಶಾಂತಿನಿಕೇತನವು ಸತ್ಯದ ಆನಂದವನ್ನು ಪ್ರತಿನಿಧಿಸಿದರೆ, ಸಾಬರಮತಿಯು ಸತ್ಯದ ತಪಸ್ಸನ್ನು ಪ್ರತಿನಿಧಿಸುತ್ತದೆ.

– *ಅನು : ಸು.ಕೌ*

ಎಲ್ಲವನ್ನೂ ಸಂಗ್ರಹಿಸುವ ವಿಶೇಷತೆ ಋಗ್ವೇದದ್ದಾಗಿದೆ

–ವಿನೋಬಾ

ವೈದಿಕ ಋಷಿಗಳು ಪ್ರಕೃತಿಯ ಆರಾಧಕರಾಗಿದ್ದರು ಎಂಬುದಾಗಿ ಕೆಲವು ಜನ ಹೇಳುತ್ತಾರೆ. ಆದರೆ ಹಾಗೆ ಇಲ್ಲ. ವೇದಗಳ ಉಪಾಸನೆಯ ವಿಷಯ ದೊಡ್ಡದು. ವೇದದಲ್ಲಿ ಹೀಗೊಂದು ಮಂತ್ರ ಬರುತ್ತದೆ – **ಏಕಂ ಸತ್ ವಿಪ್ರಃ ಬಹುಧಾ ವದಂತಿ ಅಗ್ನಿಂ ಯಮಂ ಮಾತಾ ರಿಷ್ವಾನಂ ಆ ಹುಃ** – (೧.೨೩.೧೬)

ಸತ್ಯ ಒಂದೇ, ಆದರೆ ಉಪಾಸಕಗಣ ಅದಕ್ಕೆ ಅನೇಕ ಹೆಸರುಗಳನ್ನು ಕೊಡುತ್ತದೆ, ಉದಾ: ಅಗ್ನಿ, ವಾಯು, ಯಮ, ಇತ್ಯಾದಿ. ಯಾವ ರೀತಿ ಹುಡುಗ ತನ್ನ ತಂದೆಯನ್ನು ಮನೆಯಲ್ಲಿ ಪಿತಾ ರೂಪದಲ್ಲಿ; ಅಧ್ಯಾಪಕನಾಗಿದ್ದರೆ ಶಾಲೆಯಲ್ಲಿ ಅಧ್ಯಾಪಕನ ರೂಪದಲ್ಲಿ ಮತ್ತು ಪಂಚಾಯತಿಯ ಸದಸ್ಯನಾಗಿದ್ದರೆ, ಅಲ್ಲಿ ಆ ರೂಪದಲ್ಲಿ ನೋಡುತ್ತಾನೆ. ತಂದೆಯದು ಎಷ್ಟೊಂದು ಕಾರ್ಯಗಳಿರುತ್ತವೆಯೋ ಅಷ್ಟೊಂದು ರೂಪದಲ್ಲಿ, ಮಗ ತಂದೆಯನ್ನು ನೋಡಬಲ್ಲ. ಅದೇ ಪ್ರಕಾರ ಭಕ್ತ ಭಗವಂತನನ್ನು ನಾನಾ ರೂಪಗಳಲ್ಲಿ ನೋಡಬಲ್ಲ. ಭಗವಂತನ ಅನಂತ ವಿಭೂತಿಗಳಲ್ಲಿ ನಾವು ಯಾವ ವಿಭೂತಿಯ ಪೂಜೆಯನ್ನು ಮಾಡುತ್ತೇವೋ ಅದೇ ರೂಪವು ನಮಗೆ ಕಾಣುತ್ತದೆ. ಭಿನ್ನ ಭಿನ್ನ ದೃಷ್ಟಿಯಿಂದ ನೋಡುವುದರಿಂದ ಭಗವಂತನು ವಿಭಿನ್ನವಾಗಿ ಕಾಣುತ್ತಾನೆ. ಕೆಲವೊಂದು ಕಡೆ ಇಂದ್ರನ ಉಪಾಸನೆಯಿದ್ದರೆ, ಇನ್ನು ಕೆಲವೆಡೆ ಯಮ, ಇನ್ನು ಕೆಲವು ಕಡೆ ಅಗ್ನಿಯ, ಇನ್ನು ಕೆಲವೆಡೆ ವರುಣನ. ಇದು ಪ್ರಕೃತಿ ಪೂಜೆಯಲ್ಲ, ಭಗವಂತನ ವಿಭೂತಿ ಪೂಜೆ. ಭಿನ್ನ ಭಿನ್ನ ದೇವಗಣವೇ ಪರಮಾತ್ಮನ ಭಿನ್ನ ಭಿನ್ನ ವಿಭೂತಿಗಳಾಗಿವೆ. ವಿಭೂತಿ ಚಿಂತನದಿಂದ ಗುಣವಿಕಾಸವಾಗುತ್ತದೆ. ಕೆಲವರಲ್ಲಿ ನಿರ್ಭಯತೆಯಿದ್ದರೆ, ಇನ್ನು ಕೆಲವರಲ್ಲಿ ನಮ್ರತೆ, ಕೆಲವರಲ್ಲಿ ಸೌಮ್ಯತೆ, ಇನ್ನು ಕೆಲವರಲ್ಲಿ ಮಾರ್ದವತೆ. ಪ್ರತಿಯೊಬ್ಬರಲ್ಲಿಯೂ ಇರುವ ಆ ವಿಶಿಷ್ಟ ಗುಣ ಪೂರ್ಣತ್ವವನ್ನು ತಲುಪಬೇಕೆಂಬುದೆ ವಿಭೂತಿ ಚಿಂತನದ ಒಂದು ಉದ್ದೇಶ್ಯ. ಎರಡನೆಯ ಉದ್ದೇಶ್ಯ ಯಾವ ಗುಣದ ಅಭಾವ ನಮ್ಮಲ್ಲಿದೆಯೊ ಆ ಗುಣ ಬೇರೆ ಮನುಷ್ಯನಲ್ಲಿ ಕಂಡು ಬಂದರೆ ಆ ಮನುಷ್ಯನ ಅಥವಾ ಪದಾರ್ಥದ ಬಗ್ಗೆ ಗೌರವ ಹೊಂದಬೇಕು. ಗುಣದ ಧ್ಯಾನ ಮಾಡಬೇಕು. ಆಗ ಆ ಗುಣ ತನ್ನಷ್ಟಕ್ಕೆ ತಾನೆ ನಮ್ಮಲ್ಲಿ ಬಂದು ಸೇರಿಕೊಳ್ಳುತ್ತದೆ. ಹೀಗೆ ಭಿನ್ನಭಿನ್ನ ಗುಣಗಳೊಂದಿಗೆ ಸಂಬಂಧ ಉಂಟಾಗುತ್ತಾ ಹೋದಂತೆ ಭಗವಂತನ ಗುಣ ಪ್ರಕಟವಾಗುತ್ತದೆ. ನಮ್ಮ ನಮ್ಮ ಆವಶ್ಯಕತೆಗನುಸಾರವಾಗಿ ವಿಭೂತಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ದೃಢ ನಿಶ್ಚಯಗುಣದ ವಿಕಾಸವನ್ನು ಮಾಡಿಕೊಳ್ಳಬಯಸುವುದಾದರೆ ಹಿಮಾಲಯದ ಚಿಂತನೆ ಮಾಡಬೇಕು. ಏಕೆಂದರೆ ಹಿಮಾಲಯದಲ್ಲಿ ಆ ಗುಣವಿದೆ. ಭಗವಂತನ ಒಂದೊಂದು ಅಂಶವನ್ನು ಹಿಡಿದೇ ಅವನ ಸ್ಪರ್ಶ ಮಾಡಬಹುದು. ಆ

ಮೂಲಕ ಅವನ ಪೂರ್ಣದರ್ಶನ ಮಾಡಲು ಸಾಧ್ಯ. ವೇದಗಳ ಸೂಚಿಯನ್ನು ತಯಾರಿಸಿರುವಂಥ ಶ್ರವಣಕ ಋಷಿ ಎಲ್ಲ ದೇವತೆಗಳು ಓಂಕಾರದಲ್ಲಿ ಸಮಾವಿಷ್ಟವಾಗಿವೆ ಎಂದು ಹೇಳಿದ್ದಾರೆ. ಋಗ್ವೇದದಲ್ಲಿ ಎಲ್ಲದರ ಸಂಗ್ರಹ ಮಾಡುವ ಈ ಒಂದು ಗುಣ ವಿಶೇಷತೆ ಏನಿದೆಯೋ ಅದು ಬಹು ಮಹತ್ವದ್ದು. ಅದರಲ್ಲಿ ಅಗ್ನಿಯ ಸ್ತುತಿ ಮಾಡಿದಾಗ "ಹೇ ಅಗ್ನೆ, ನೀನು ಎಲ್ಲವೂ ಆಗಿದ್ದೀಯೆ. ಎಷ್ಟೊಂದು ದೇವತೆಗಳಿದ್ದಾರೋ ಅವರೆಲ್ಲ ನಿನ್ನಲ್ಲಿ ತುಂಬಿದ್ದಾರೆ" ಎಂದು ಹೇಳಲಾಗುತ್ತದೆ. ಹೀಗೆ ಒಂದೇ ದೇವತೆಯ ಮೇಲೆ ಎಲ್ಲ ದೇವತೆಗಳ ರೂಪವನ್ನೂ ಆರೋಪಿಸಲಾಗುತ್ತದೆ. ಇದಕ್ಕೇನೆನ್ನಬೇಕು? ಏಕೇಶ್ವರವಾದ, ಅನೇಕ ಈಶ್ವರವಾದ, ಬಹುದೇವತಾವಾದ, ಅದ್ವೈತವಾದ ಅಥವಾ ದ್ವೈತವಾದ? ಯಾವುದೇ ಪ್ರಕಾರದ ವಿರೋಧ ಅಥವಾ ವಿಸಂವಾದಕ್ಕೆ ಅವಕಾಶವೇ ಇಲ್ಲದಿರುವಂಥ ವಿಲಕ್ಷಣ ಸೃಷ್ಟಿಯನ್ನು ಶ್ರವಣಿಕ ಋಷಿ ಮಾಡಿದ್ದಾರೆ.

ಋಗ್ವೇದದಲ್ಲಿ ಒಬ್ಬ ಋಷಿ ಒಂದೇ ದೇವತೆಯ ಉಪಾಸನೆ ಮಾಡುತ್ತಾನೆ. ಪರಾಶರ ಋಷಿ ಕೇವಲ ಅಗ್ನಿ ಉಪಾಸನೆ ಮಾಡಿ ಶಾಂತವಾಗಿ ಬಿಡುತ್ತಾರೆ. ನಾವು ಅವರ ಸೂಕ್ತಿಗಳನ್ನು ಅಧ್ಯಯನಮಾಡಿ ಅವರು ಒಂದೇ ದೇವತೆಯ ಕೈಹಿಡಿದು ಎಲ್ಲವನ್ನೂ ಹೇಗೆ ಅರಿತುಕೊಂಡರೆಂಬುದನ್ನು ತಿಳಿದುಕೊಳ್ಳಬೇಕು. ಇನ್ನು ಕೆಲವು ಋಷಿಗಳು ಭಿನ್ನ ಭಿನ್ನ ಕ್ರಮದಿಂದ ಅನೇಕ ದೇವತೆಗಳ ಉಪಾಸನೆ ಮಾಡುತ್ತಾರೆ. ಆ ಎಲ್ಲ ಅನುಭವಗಳನ್ನೂ ಒಟ್ಟುಗೂಡಿಸಿ ಅವರು ಪರಮಾತ್ಮನನ್ನು ಯಾವ ರೀತಿ ಹಿಡಿದರೆಂಬುದಾಗಿ ನಮಗೆ ತಿಳಿಸುತ್ತಾರೆ. ಇನ್ನು ಕೆಲವು ಋಷಿಗಳು ಸರ್ವಸಾಧಾರಣ ದೇವತೆಗಳಾದ ಅಗ್ನಿ, ವರುಣ ಮುಂತಾದ ದೇವತೆಗಳನ್ನಲ್ಲದೆ ಕೆಲ ವಿಶಿಷ್ಟ ದೇವತೆಗಳನ್ನೂ ಪೂಜಿಸುತ್ತಾರೆ. ಉದಾಹರಣೆಗೆ ಗೃತ್ಸಮನ ಋಷಿಯು ಬ್ರಹಸ್ಪತಿಯ ಉಪಾಸನೆ ಮಾಡಿದರು; ಭಾರಧ್ವಾಜರು ಪೂಷನ್‌ನ ಉಪಾಸನೆ ಮಾಡಿದರು. ವಶಿಷ್ಟರು ಉಷೆ ಮತ್ತು ವರುಣನ ಉಪಾಸನೆ ಮಾಡಿದರು. ವಾಮದೇವ ಋಭವನ ಉಪಾಸನೆ ಮಾಡಿದರು. ಅವರೆಲ್ಲರೂ ತಮ್ಮ ತಮ್ಮ ಉಪಾಸನೆಯ ಆ ಅನುಭವವನ್ನು ನಮಗೆ ತಿಳಿಸಿದ್ದಾರೆ. ಈ ದೃಷ್ಟಿಯಿಂದ ಭಿನ್ನ ಭಿನ್ನ ದೇವತೆಗಳ ಮಂತ್ರಗಳನ್ನು ಏಕತ್ರಗೊಳಿಸಿ ನೋಡುವುದರಿಂದ ಬಹಳ ಲಾಭವಿದೆ.

ಇಲ್ಲಿ ಒಂದು ಮಾತನ್ನು ತಿಳಿಯಬೇಕಿದೆ. ಉಪಾಸನೆಯಲ್ಲಿ ಶಾಸ್ತ್ರೀಯ ಉದ್ದೇಶ ಒಂದಿದೆ. ಅದು ಮನಸ್ಸಿನಿಂದ ಮೇಲೇಳುವುದು. ಅದು ನಿಜವಾದ ಉಪಾಸನೆ. ಸೂರ್ಯನನ್ನು ಈಶ್ವರ ಎಂದು ತಿಳಿದು ನಿಷ್ಕಾಮ ಭಾವದಿಂದ ಉಪಾಸನೆ ಮಾಡಿದರೆ ಆಗ ಅದು ಈಶ್ವರನ ಉಪಾಸನೆಯಾಗುತ್ತದೆ. ಸೂರ್ಯನ ಉಪಾಸನೆಯ ಹಿಂದೆ ಭಕ್ತಿಯನ್ನು ಪಡೆಯಬೇಕೆಂಬ ಉದ್ದೇಶವಿದ್ದರೆ ಅದು ಈಶ್ವರನ ಉಪಾಸನೆಯಾಗುತ್ತದೆ. ಹೀಗೆ ಉಪಾಸನೆಯ ಹಿಂದೆ ಯಾವುದಾದರೊಂದು ಕಾಮನೆ ಇದ್ದಲ್ಲಿ ಅದು ಸಕಾಮ ಉಪಾಸನೆಯಾಗುತ್ತದೆ. ಅಂಥ ಉಪಾಸನೆ ಭಗವಂತನ ಉಪಾಸನೆಯಾಗಲಾರದು.

ಮನಸ್ಸಿನದು ಅನೇಕ ವೃತ್ತಿಗಳಿವೆ. ಅದಕ್ಕನುಸಾರವಾಗಿ ಅನೇಕ ದೇವತೆಗಳಿದ್ದಾರೆ. ಮನಸ್ಸಿನ ಒಂದೊಂದು ವೃತ್ತಿಯನ್ನು ತೆಗೆದುಕೊಂಡು ಒಂದೊಂದು ದೇವತೆಯನ್ನು ನಿಲ್ಲಿಸಲಾಗುತ್ತದೆ. ಬುದ್ಧಿಯ ಅಭಿಲಾಷೆಯಾದರೆ ಗಣೇಶ; ಬಲದ ಇಚ್ಛೆಯಾದರೆ ಹನುಮಂತ; ವೈಭವದ ಇಚ್ಛೆಯಾದರೆ ಲಕ್ಷ್ಮಿ; ಸುಂದರ ರೂಪದ ಆಕಾಂಕ್ಷೆಯಾದರೆ ಸೂರ್ಯ. ಈ ಪ್ರಕಾರ ಮನಸ್ಸಿನ ವೃತ್ತಿಯಿದ್ದಂತೆ ಆ ರೀತಿಯ ದೇವತೆ ಹೊರಗಡೆ ನಿಲ್ಲುತ್ತಾರೆ. ಒಂದು ಪ್ರಕಾರದಲ್ಲಿ ಆ ದೇವತೆಗಳು ಮನೋರೂಪವೇ ಎಂದು ಹೇಳಬೇಕಾಗುತ್ತದೆ. ಕೇವಲ ಆ ದೇವತೆಗಳ ಉಪಾಸನೆಯ ಕಾರಣದಿಂದ ಮನಸ್ಸಿನಿಂದ ಮೇಲೆ ಬರುವುದು ಎಂದಿಗೂ ಸಂಭವವಿಲ್ಲ. ಆದರಿಲ್ಲಿ ಉಪಾಸನೆಯ ಶಾಸ್ತ್ರೀಯ ಉದ್ದೇಶವೇ ಕುಂಠಿತವಾಗುತ್ತದೆ. ವೇದದಲ್ಲಿ ದೇವತೆಗಳ ಸ್ವರೂಪ ಅತ್ಯಂತ ವಿಕಸಿತವೂ, ವೈಜ್ಞಾನಿಕವೂ ಆಗಿದೆ. ಅದರಲ್ಲಿ ಸೂಕ್ಷ್ಮ ಬುದ್ಧಿಯಿದೆ, ಉಪಾಸನೆಯ ಉತ್ತಮ ಪದ್ಧತಿ ವೇದದಲ್ಲಿ ಸಿದ್ಧವಾಗಿದೆ.

ಯಾವ ರೀತಿ ಮಾನವರಲ್ಲಿ ನಾಲ್ಕು ವರ್ಣಗಳಿವಿಯೊ ಅದೇ ರೀತಿ ದೇವತೆಗಳಲ್ಲಿ ಕೂಡ ನಾಲ್ಕು ವರ್ಣಗಳಿವೆ. ದೇವತೆಗಳಲ್ಲಿ ಯಾರು ಬ್ರಾಹ್ಮಣ, ಯಾರು ಕ್ಷತ್ರಿಯ, ಯಾರು ವೈಶ್ಯ ಇತ್ಯಾದಿಗಳ ವರ್ಣನೆ ವೇದದಲ್ಲಿದೆ. ಅಗ್ನಿ ಬ್ರಾಹ್ಮಣ; ಇಂದ್ರ ಕ್ಷತ್ರಿಯ; ಪ್ರಥ್ವಿ ಶೂದ್ರ; ಇಯಂ ವೈಪೂಷಾ- ಪೃಥ್ವಿಯ ಪೋಷಕ ದೇವತೆ. ಬ್ರಾಹ್ಮಣ ಅಗ್ನಿ ಎಂದರೆ ಅದರ ಅರ್ಥವೇನು? ಅಗ್ನಿ ಒಂದು ಸ್ಥಳದಲ್ಲಿ ಕೂಡುತ್ತಾನೆ ತನ್ನ ಸ್ಥಳವನ್ನು ಬಿಡುವುದಿಲ್ಲ. ಯಾರು ಅದರ ಹತ್ತಿರ ಹೋಗುತ್ತಾರೊ ಅವನಿಗೆ ಶಾಖ ದೊರೆಯುವುದು. ಯಾರು ದೂರ ಇರುತ್ತಾರೊ ಅವನಿಗೆ ಶಾಖ ದೊರೆಯುವುದಿಲ್ಲ. ಅಂದರೆ ಬ್ರಾಹ್ಮಣ ತನ್ನ ಚಿಂತನ-ಮನನವನ್ನು ತನ್ನ ಸ್ಥಳದಲ್ಲಿಯೇ ಇದ್ದುಕೊಂಡು ಮಾಡುತ್ತಾನೆ. ಇಂದ್ರ ಇತ್ಯಾದಿ ದೇವತೆ ಕ್ಷತ್ರಿಯರು, ವೈಶ್ಯರ್ಯಾರು? ಮಾರುತ ಗಣ. ಇದು ಜಗತ್ತೆಲ್ಲ ಹಬ್ಬಿದೆ.

ವಾಯು ಎಲ್ಲಿಂದೆಲ್ಲಿಗೆ ಹೋಗುತ್ತದೆ! ಹಾಗೆಯೇ ವ್ಯಾಪಾರಿಗಳು ಎಲ್ಲ ಕಡೆಯೂ ಹಬ್ಬಿದ್ದಾರೆ. ಶ್ವಾಸೋಛ್ವಾಸ ನಡೆಯುತ್ತದೆ. ಅದು ಮರುತ್‌ಕಾರ್ಯ. ಎಲ್ಲರಿಗೂ ಪ್ರಾಣವನ್ನು ತಲುಪಿಸುವುದು ಮರುತ್‌ಗಣದ ಕೆಲಸ. ವ್ಯಾಪಾರಿಗಳದು ಟ್ರೇಡ್‌ಗಿಲ್ಡ್ ಇರುತ್ತದಲ್ಲ ಹಾಗೆ ಮರುತ್‌ಗಣವಿದೆ. ಆದ್ದರಿಂದ ವೈದಿಕ ಋಷಿಗಳು ಮರುತ್‌ಗಳನ್ನು ಗಣಗಳೆಂಬುದಾಗಿ ಕಲ್ಪನೆ ಮಾಡಿದರು. ವ್ಯಾಪಕವಾಗಿ ಪ್ರಾಣವನ್ನು ತಲುಪಿಸುವುದರ ಜೊತೆಗೆ ಅನ್ನವನ್ನೂ ತಲುಪಿಸಬೇಕಾಗುತ್ತದೆ. ಅನ್ನವಿಲ್ಲದೆ ಪ್ರಾಣ ವಿಕಸಿತವಾಗುವುದಿಲ್ಲವಾದ್ದರಿಂದ, ಅನ್ನೋತ್ಪಾದನೆ ಅರ್ಥಾತ್ ಕೃಷಿ ಕಾರ್ಯ ಕೂಡ ವೈಶ್ಯರ ವಶದಲ್ಲಿದೆ. ಇದರ ಅರ್ಥ ಬ್ರಹ್ಮವಿದ್ಯೆಯ ಸಂಘಟನಾತ್ಮಕ ಪ್ರಚಾರಕ್ಕಾಗಿ ವೈಶ್ಯರಿದ್ದಾರೆ. ವ್ಯಕ್ತಿಶಃ ಪ್ರಚಾರ ಮಾಡುವವ ಬ್ರಾಹ್ಮಣ. ಅವನು ತನ್ನ ಸ್ಥಳದಲ್ಲಿ ಕುಳಿತುಕೊಂಡೇ ಬ್ರಹ್ಮವಿದ್ಯೆ ಪ್ರಚಾರ ಮಾಡುತ್ತಾನೆ. ಆದರೆ ಪ್ರಪಂಚದಲ್ಲಿ ಎಲ್ಲ ಕಡೆಗೂ ಬ್ರಹ್ಮ ವಿದ್ಯೆಯ ಪ್ರಚಾರ ಮಾಡುವ ಕೆಲಸ ವೈಶ್ಯರದ್ದಾಗಿದೆ.

(ಮುಂದುವರೆಯುವುದು ...) ಅನು- ಸು.ಕೌ

ಅಭಿವೃದ್ಧಿ ಮತ್ತು ಅದರ ಕರಾಳ ಛಾಯೆ

- ಗುರುರಾಜ್ ದಾವಣಗೆರೆ

ಅಭಿವೃದ್ಧಿಯ ಮಾತು ಬಂತೆಂದರೆ ಈ ಜನರ ನಿದ್ದೆ ಹಾರಿ ಹೋಗುತ್ತದೆ. ಡ್ಯಾಂ, ಕಾಲುವೆ, ರಸ್ತೆ, ಅಭಯಾರಣ್ಯ, ಕಾರ್ಖಾನೆ, ವಿದ್ಯುತ್ ಎಂಬ ಶಬ್ದಗಳು ಇವರನ್ನು ಮೂರ್ಛೆಗೊಳಿಸುತ್ತವೆ. ಸರಕಾರದ ಅಭಿವೃದ್ಧಿ ಯೋಜನೆಗಳ ಫಲವಾಗಿ ರಾತ್ರೋರಾತ್ರಿ ಜನ್ಮತಾಳುವ ಇವರು ತಲೆತಲಾಂತರದಿಂದ ಬಾಳಿ ಬದುಕಿದ ನೆಲೆ-ನೆಲಗಳಿಂದ ದೂರವಾಗಿ ಸರಕಾರ ತೋರಿಸುವ ಹೊಸ ಜಾಗ, ಹೊಲಗಳಿಗೆ ಬಂದು ಕಾಣದ ಬದುಕಿನ ಮತ್ತೊಂದು ಪುಟ ತೆರೆದು ಕೂರುತ್ತಾರೆ. ಇವರು ಪರಿಸರ ನಿರಾಶ್ರಿತರು. ಇವರದು ಹೊಸ ಬಗೆಯ ನಾಗರಿಕತ್ವ ಸರಕಾರದ ಪರಿಭಾಷೆಯ 'ಪರಿಸರ ಸ್ನೇಹಿ' ಯೋಜನೆಗಳ ತ್ಯಾಜ್ಯ ವಸ್ತುಗಳೆಂಬಂತೆ ಇವರನ್ನು ಇರುವ ಸ್ಥಳಗಳಿಂದ ಹೊರಹಾಕಲಾಗುತ್ತದೆ.

ಇವರ ಸಂಖ್ಯೆ ಭಾರತವೂ ಸೇರಿದಂತೆ ವಿಶ್ವದ ಅನೇಕ ಭಾಗಗಳಲ್ಲಿ ಗಾಬರಿ ಹುಟ್ಟಿಸುವ ಪ್ರಮಾಣದಲ್ಲಿ ಏರುತ್ತಿದೆ. ಬೃಹತ್ ಯೋಜನೆಗಳ ಮೂಲಕ ತೀವ್ರ ಅಭಿವೃದ್ಧಿಯನ್ನು ಸಾಧಿಸ ಬಯಸುವ ಎಲ್ಲ ದೇಶಗಳಲ್ಲಿ ನಡೆಯುವ 'ಜನ ಪಲ್ಲಟ'ದ ಕುರಿತು ವಿಶ್ವಬ್ಯಾಂಕ್ ತನ್ನ ವರದಿಯನ್ನು ಬಹಿರಂಗಪಡಿಸಿದೆ. ಸವಿಸ್ತಾರ ವರದಿಯ ಸಾರಾಂಶ ಇಷ್ಟು ಬೃಹತ್ ಅಣೆಕಟ್ಟು ರಸ್ತೆ ಸಂಪರ್ಕ, ಮೇಲು ರಸ್ತೆ ನಿರ್ಮಾಣ, ಗಣಿಗಾರಿಕೆ, ಕಾರ್ಖಾನೆ ನಿರ್ಮಾಣ ಮತ್ತು ಅರಣ್ಯ ಸಂರಕ್ಷಣೆಗಳಿಗಾಗಿ ಕಳೆದ ದಶಕವೊಂದರಲ್ಲೇ ವಿಶ್ವದ ವಿವಿಧ ಜಾಗಗಳಲ್ಲಿ ತಮ್ಮ ಮೂಲ ನೆಲೆಗಳಿಂದ ಸ್ಥಳಾಂತರಗೊಂಡವರ ಸಂಖ್ಯೆ ಒಂದು ನೂರು ಮಿಲಿಯನ್, ಅಂದರೆ ಹತ್ತು ಕೋಟಿ ಜನ. ಇದರಲ್ಲಿ ಪರಿಸರ ನಿರಾಶ್ರಿತರ ಸಂಖ್ಯೆ ಎರಡೂವರೆ ಕೋಟಿ. ೨೦೧೦ರ ವೇಳೆಗೆ ಈ ಸಂಖ್ಯೆ ದುಪ್ಪಟ್ಟಾಗಲಿದ್ದು ಇನ್ನು ನಲವತ್ತು ವರ್ಷಗಳಲ್ಲಿ ಅಂದರೆ ೨೦೦೫ರ ವೇಳೆಗೆ ಹದಿನೈದು ಕೋಟಿ ಜನ ಪರಿಸರ ಸಂಬಂಧಿ ಯೋಜನೆಗಳಿಂದಲೇ ಬೇರೆಡೆಗೆ ಪಲ್ಲಟಗೊಳ್ಳಲಿದ್ದಾರೆ. ಆಫ್ರಿಕಾ ಮತ್ತು ಏಶಿಯಾ ಖಂಡಗಳಲ್ಲೇ ಇವರ ಸಂಖ್ಯೆ ೨೫ ಮಿಲಿಯನ್ ತಲುಪಲಿದೆ. ಜಗತ್ತಿನಲ್ಲಿ ಇದುವರೆಗೆ ನೀರಿನ ತೀವ್ರ ಅಭಾವದಿಂದ ೫೫೦ ಮಿಲಿಯ ಜನ ತಮ್ಮ ವಾಸದ ಮೂಲಗಳನ್ನು ತೊರೆದು ಬೇರೊಂದು ಪರಿಸರಕ್ಕೆ ವರ್ಗಗೊಂಡಿದ್ದಾರೆ. ಮೆಕ್ಸಿಕೋದಲ್ಲಿ ಪ್ರತಿ ವರ್ಷ ಹತ್ತು ಲಕ್ಷ ಜನ ಸರಕಾರದ ಯೋಜನೆಗಳ ಫಲವಾಗಿ ಸ್ಥಳಾಂತರಗೊಂಡಿದ್ದಾರೆ. ಜನಸಂಖ್ಯಾ ಒತ್ತಡ, ಅಪೌಷ್ಟಿಕತೆ, ಸಾಂಕ್ರಾಮಿಕ ರೋಗಗಳು, ನಿರುದ್ಯೋಗ, ಅತಿಯಾದ ಮತ್ತು ಶೀಘ್ರ ನಗರೀಕರಣ, ಬರ, ಬಡತನ, ಪ್ರವಾಹಗಳಲ್ಲದೆ ದೇಶದ ಅಭಿವೃದ್ಧಿಗಾಗಿ ಸರಕಾರ ರೂಪಿಸುವ, ಕೈಗೆತ್ತಿಕೊಳ್ಳುವ ಹಲವು ಬೃಹತ್ ನೀರಾವರಿ, ವಿದ್ಯುತ್ ಯೋಜನೆಗಳ ಫಲವಾಗಿ ಜಗತ್ತಿನಾದ್ಯಂತ ಪರಿಸರ ನಿರಾಶ್ರಿತರ ಸಂಖ್ಯೆ ದಿನೇ ದಿನೇ ಏರುತ್ತಿದೆ. ನಿಯಮ

ಯೋಜನೆಗಳನ್ನು ರೂಪಿಸಿ ಈ ಬೃಹತ್ ಜನಪಲ್ಲಟವನ್ನು ನಿಯಂತ್ರಿಸದಿದ್ದರೆ ಮುಂಬರುವ ದಿನಗಳಲ್ಲಿ ವಿಶ್ವದ ಎಲ್ಲ ಭಾಗಗಳಲ್ಲಿ ನೈಜ ಆಶ್ರಿತರ ಮತ್ತು ಪರಿಸರ ನಿರಾಶ್ರಿತರ ನಡುವಿನ ಪೈಪೋಟಿ ಮತ್ತು ತಿಕ್ಕಾಟಗಳು ಎಲ್ಲ ರಾಷ್ಟ್ರಗಳ ನಿದ್ದೆಗೆಡಿಸಲಿವೆ. ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳು ಬೃಹತ್ ಯೋಜನೆಗಳ ಸಾಧಕ-ಬಾಧಕಗಳನ್ನು ಕೂಲಂಕುಷವಾಗಿ ಅಭ್ಯಸಿಸಿದ ನಂತರವೇ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಬೇಕು. ಹಾಗೆಯೇ ಜನಪಲ್ಲಟ ಕಡಿಮೆಯಾಗಬೇಕು ಎಂಬುದು ವರದಿಯ ಆಶಯ ಮತ್ತು ಒತ್ತಾಯ.

ಇಲ್ಲಿನ ಪರಿಸರ ನಿರಾಶ್ರಿತರ ಜನ್ಮ ಮೂಲಗಳು ಎರಡು. ಒಂದು, ಬೃಹತ್ ಅಣೆಕಟ್ಟುಗಳು. ಮತ್ತೊಂದು ವಿದ್ಯುಚ್ಛಕ್ತಿ ಕಲ್ಪಿಸುವ ಜಲ-ಉಷ್ಣ ವಿದ್ಯುತ್ ಯೋಜನೆಗಳು. ೧೯೫೧ರಿಂದ ಇಲ್ಲಿಯವರೆಗೆ ಹತ್ತು ಪಂಚವಾರ್ಷಿಕ ಯೋಜನೆಗಳು ಮುಗಿದು ಹನ್ನೊಂದನೆಯದು ಜಾರಿಯಲ್ಲಿದೆ. ಜಗತ್ತಿನಲ್ಲಿ ಬೃಹತ್ ಅಣೆಕಟ್ಟು ನಿರ್ಮಿಸುವ ಮುಂಚೂಣಿ ರಾಷ್ಟ್ರಗಳಲ್ಲಿ ಭಾರತ ಮೂರನೆಯ ದೊಡ್ಡ ದೇಶ. ಇದುವರೆಗೆ ೩೬೦೦ ಅಣೆಕಟ್ಟುಗಳನ್ನು ಭಾರತದ ವಿವಿಧ ನದಿಗಳಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ. ಮತ್ತು ಇನ್ನೂ ೭೦೦ ಜಲಾಶಯಗಳು ನಿರ್ಮಾಣಗೊಳ್ಳುತ್ತಿವೆ. ಮೊದಲ ಎಂಟು ಪಂಚವಾರ್ಷಿಕ ಯೋಜನೆಗಳಲ್ಲಿ ನಿರ್ಮಾಣಗೊಂಡ ಬೃಹತ್ ಮತ್ತು ಸಣ್ಣ ಅಣೆಕಟ್ಟುಗಳು, ಗಣಿಗಾರಿಕೆ ಮತ್ತು ಕಾರ್ಖಾನೆ ನಿರ್ಮಾಣಗಳಿಂದಾಗಿ ೨೨ ಮಿಲಿಯ ಜನ ತಮ್ಮ ಮೂಲ ನೆಲೆಗಳಿಂದ ಒತ್ತಾಯಪೂರ್ವಕವಾಗಿ ಪಲ್ಲಟಗೊಂಡಿದ್ದಾರೆ. ಜಲಾಶಯಗಳಿಂದಾಗಿ ಶೇ.೭೭, ಗಣಿಗಾರಿಕೆಯಿಂದ ಶೇ.೧೨ ಮತ್ತು ಕೈಗಾರಿಕೆಗಳಿಂದ ಶೇ.೬ರಷ್ಟು ಮೂಲನಿವಾಸಿಗಳು ಪಲ್ಲಟಗೊಂಡಿದ್ದಾರೆ. ಅಲ್ಲದೆ ೧೯೨ ಸಣ್ಣ ನಿರಾವರಿ ಯೋಜನೆಗಳ ಫಲವಾಗಿ ನೆಲೆ ಕಳೆದುಕೊಂಡ ೦.೬ ಮಿಲಿಯ ಜನರ ಪರಿಹಾರ ಮತ್ತು ಪುನರ್ವಸತಿಯ ಬಗ್ಗೆ ಯಾವುದೇ ಮಾಹಿತಿ ಸರಕಾರದ ಬಳಿ ಇಲ್ಲ. ಹಾಗಿದ್ದೂ ಪ್ರತಿಯೊಂದು ಯೋಜನೆಯನ್ನು ಕೈಗೆತ್ತಿಕೊಂಡಾಗಲೂ ಅನುಸರಿಸಬೇಕಾದ ನಿಯಮ ಮತ್ತು ಮುಂಜಾಗರೂಕತೆಗಳನ್ನೆಲ್ಲ ಗಾಳಿಗೆ ತೂರುವ ಅಧಿಕಾರಿ ವರ್ಗ ಅನೇಕ ವೇಳೆ ತಪ್ಪು ಅಂಕಿ-ಅಂಶಗಳನ್ನು ಜನರ ಮುಂದಿಡುತ್ತದೆ.

ಹಿರಾಕುಡ್ ಅಣೆಕಟ್ಟು ನಿರ್ಮಿಸಿದಾಗ ಸರಕಾರಿ ದಾಖಲೆಗಳಲ್ಲಿ ದಾಖಲಾದ ನಿರಾಶ್ರಿತರ ಸಂಖ್ಯೆ ೧.೧ ಲಕ್ಷ ವಾಸ್ತವದಲ್ಲಿ ಸ್ಥಳಾಂತರಗೊಂಡವರು ೧.೮ ಲಕ್ಷ ಜನ. ಅಲ್ಲಿಗೆ ೭೦ ಸಾವಿರ ಜನ ನಾಪತ್ತೆ. ಪಶ್ಚಿಮ ಮಧ್ಯಪ್ರದೇಶದಲ್ಲಿ ನರ್ಮದಾ ನದಿಗೆ ನಿರ್ಮಿಸಲಾದ ಬಾರ್ಗಿ ಜಲಾಶಯದ ಜಾಗದಲ್ಲಿ ಮುಳುಗಡೆಯಾದ ಹಳ್ಳಿಗಳ ಸಂಖ್ಯೆ ೧೬೨. ಆದರೆ ಸರಕಾರ ಹೇಳಿದ್ದು ಕೇವಲ ೧೦೦. ಇಲ್ಲಿ ೬೨ ಹಳ್ಳಿ ಗುಳುಂ. ಅಲ್ಲದೆ ಜಲಾಶಯದ ಹಿನ್ನೀರಿನಲ್ಲಿ ಆಗುವ ಏರಿಳಿತಗಳಿಂದ ಮುಳುಗಡೆಯಾಗುವ ಹಳ್ಳಿಗಳ ಜನ-ಜಾನುವಾರು ವಸತಿಯ ಬಗ್ಗೆ ಯಾವುದೇ ಲೆಕ್ಕಾಚಾರ ಹಾಕದ ಯೋಜನಾ ತಂಡ ಅವರ ಪುನರ್ವಸತಿಯ ಬಗ್ಗೆ

ತಲೆಕೆಡಿಸಿಕೊಳ್ಳಲೇ ಇಲ್ಲ.

ಸಾಮಾನ್ಯವಾಗಿ ಜಲಾಶಯಗಳು ನಿರ್ಮಾಣಗೊಂಡಾಗ ನೀರು ಸಂಗ್ರಹಗೊಳ್ಳುವ ಜಾಗವಲ್ಲದೆ ಜಲಾಶಯಕ್ಕೆ ಅಂಟಿಕೊಳ್ಳುವ ಕಾಲುವೆಗಳು, ಜಲಾನಯನ ಪ್ರದೇಶ, ಕೆಳ ಹರಿವು ಮತ್ತು ಹೊಸದಾಗಿ ಬೆಳಸಲ್ಪಡುವ ಅರಣ್ಯ ತಾಣಗಳಿಂದಲೂ ಜನರನ್ನು ಎತ್ತಂಗಡಿ ಮಾಡಲಾಗುತ್ತದೆ. ಬೃಹತ್ ಅಣೆಕಟ್ಟುಗಳು ಅಪಾರ ಪ್ರಮಾಣದ ಕಾಡುಗಳನ್ನು ಮುಳುಗಿಸುವುದರಿಂದ ಜೀವ ವೈವಿಧ್ಯವನ್ನು ಸಂರಕ್ಷಿಸಿ ಕಾಪಾಡಲು ಬೇಕಾಗುವ ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವನಗಳನ್ನು ಸ್ಥಾಪಿಸಬೇಕಾಗುತ್ತದೆ. ಆಗ ಈ ಜಾಗಗಳಿಂದಲೂ ಅಲ್ಲಿನ ಮೂಲ ನಿವಾಸಿಗಳನ್ನು ಸ್ಥಳಾಂತರಿಸುವ ಕೆಲಸ ನಡೆಯುತ್ತದೆ.

ಈಗ ವಿವಾದದ ಕೇಂದ್ರ ಬಿಂದುವಾಗಿರುವ ನಂದಿಗ್ರಾಮ ಯೋಜನೆ(ಎಸ್‌ಇಝಡ್), ಗುಜರಾತ್‌ನ ಸರ್ದಾರ್ ಸರೋವರ ಹಾಗೂ ತದಡಿ, ನಾಗಾರ್ಜುನ ಸ್ಥಾವರಗಳ ವಿಷಯದಲ್ಲೂ ಸರಕಾರಗಳು ಅವೈಜ್ಞಾನಿಕವಾಗಿ ವರ್ತಿಸುತ್ತಿವೆ. ಅಪಕ್ವ ಯೋಜನೆಯನ್ನು ಕೈಗೊಂಡು ಅಸಂಬದ್ಧ ಅಂಕಿ–ಅಂಶಗಳನ್ನು ನೀಡಿ ನಿರಾಶ್ರಿತರ ಪುನರ್ವಸತೀಕರಣದ ಬಗ್ಗೆ ಲಘುವಾಗಿ ವರ್ತಿಸಿದ್ದರಿಂದಲೇ ನ್ಯಾಯಾಲಯ ನರೇಂದ್ರ ಮೋದಿ ಸರಕಾರಕ್ಕೆ ಪರಿಹಾರ ಮತ್ತು ಪುನರ್ವಸತಿ ಕಾರ್ಯವನ್ನು ಸರಿಯಾಗಿ ಮಾಡಬೇಕೆಂದು ತಾಕೀತು ಮಾಡಿದೆ.

೧೩೧೨ ಕಿ.ಮೀ. ಉದ್ದದ ನರ್ಮದಾ ನದಿ ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಹರಿಯುತ್ತದೆ. ಇದರ ಉದ್ದಕ್ಕೂ ೩೦ ಬೃಹತ್, ೧೩೫ ಮಧ್ಯಮ ಮತ್ತು ೩೦೦೦ ಸಣ್ಣ ಜಲಾಶಯಗಳನ್ನು ನಿರ್ಮಿಸುವ ನರ್ಮದಾ ಕಣಿವೆ ಯೋಜನೆಯನ್ನು ೧೯೮೦ರಲ್ಲಿ ರೂಪಿಸಲಾಯಿತು. ಅದರ ಫಲವಾಗಿ ನಿರ್ಮಾಣಗೊಳ್ಳುತ್ತಿರುವ ಸರ್ದಾರ್ ಸರೋವರ ಅಣೆಕಟ್ಟಿನಿಂದ ೫೦ ಲಕ್ಷ ಎಕರೆ ಭೂಮಿಗೆ ನೀರು, ೧೪೫೦ ಮೆಗಾವ್ಯಾಟ್ ವಿದ್ಯುತ್, ೮೦೦೦ ಹಳ್ಳಿ ಮತ್ತು ೧೩೫ ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶ ಸರಕಾರಕ್ಕಿದೆ. ಇದಕ್ಕೆ ತಗಲುವ ಖರ್ಚು ಹತ್ತು ಬಿಲಿಯನ್ ಡಾಲರ್‌ಗಳು ಇದು. ನಿರಾವರಿಯೋಜನೆಗಳಿಗಾಗಿ ಭಾರತ ಖರ್ಚು ಮಾಡುವ ಒಟ್ಟು ಹಣದ ಅರ್ಧದಷ್ಟು, ೧೩೨ ಮೈಲಿ ಉದ್ದದ ಜಲಾಶಯ ೯೧,೦೦೦ ಎಕರೆ ಜಾಗವನ್ನು ಮುಳುಗಿಸುವುದಲ್ಲದೆ ೨೮,೦೦೦ ಎಕರೆ ಕಾಡನ್ನೂ ನುಂಗಿಬಿಡುತ್ತದೆ. ಅದರ ಕಾಲುವೆಗಳು ೨ಲಕ್ಷ ಎಕರೆ ಪ್ರದೇಶವನ್ನು ಆವರಿಸುತ್ತವೆ. ಇದರಿಂದ ಒಂದು ಮಿಲಿಯನ್ ಜನರು ಅನಿವಾರ್ಯವಾಗಿ ಸ್ಥಳಾಂತರಗೊಳ್ಳುತ್ತಾರೆ. ಭಾರತದ ಜನಸಂಖ್ಯೆಯ ಶೇ.೮ರಷ್ಟಿರುವ ಆದಿವಾಸಿಗಳು ಈ ಜಲಾಶಯದ ಸುತ್ತಲಿನ ಜಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶತಮಾನಗಳಿಂದ ಅರಣ್ಯದಲ್ಲಿ ಬದುಕಿ ಅದನ್ನು ಸಂರಕ್ಷಿಸಿಕೊಂಡು ಬಂದಿರುವ ಇವರನ್ನು ನಾಗರಿಕ ಪ್ರಪಂಚಕ್ಕೆ ದೂಡುವುದನ್ನು ಪ್ರಜ್ಞಾವಂತರೆಲ್ಲ ವಿರೋಧಿಸಿದ್ದಾರೆ. ಇದರಿಂದಾಗಿ ಆದಿವಾಸಿಗಳ

ಸಂಸ್ಕೃತಿ ಮತ್ತು ರೈತಾಪಿ ಜನರ ಭಾಷೆ, ಸಂಸ್ಕಾರ, ಆಚರಣೆ, ಜೀವನಕ್ರಮಗಳೆಲ್ಲ ಒಂದೇ ಏಟಿಗೆ ನಾಶವಾಗುತ್ತವೆ. ಸರಕಾರದ ಅಸಮರ್ಪಕ ಪರಿಹಾರ ಮತ್ತು ಪುನರ್ವಸತೀಕರಣಗಳಿಂದ ಪರಿಚಯವಿಲ್ಲದ ಊರು-ಕೇರಿ ಸೇರುವ ಇವರು ಅಕ್ಷರಶಃ ಅನಾಥರಾಗಿಬಿಡುತ್ತಾರೆ.

ಮಧ್ಯಪ್ರದೇಶದ ಪೂರ್ವ ನಿಮಾರ್‌ನಲ್ಲಿ ಇದೇ ನರ್ಮದಾ ಸಾಗರ್ ಎಂಬ ಜಲಾಶಯವನ್ನು ಸಮುದ್ರಮಟ್ಟದಿಂದ ೨೬೨.೧೯ ಮೀ ಎತ್ತರದಲ್ಲಿ ನಿರ್ಮಿಸಲಾಗುತ್ತಿದೆ. ಇದು ೨೪೯ ಹಳ್ಳಿಗಳನ್ನು ಮುಳುಗಿಸಿ ೪೦,೦೦೦ ಕುಟುಂಬಗಳನ್ನು ಹೊರಹಾಕುತ್ತದೆ. ಇಲ್ಲಿ ೧,೨೩,೦೦೦ ಹೆಕ್ಟೇರ್ ಭೂಮಿಗೆ ನೀರುಣಿಸಲು ೯೧,೪೩೮ ಹೆಕ್ಟೇರ್ ಭೂ ಪ್ರದೇಶವನ್ನು ಮುಳುಗಿಸಲಾಗುತ್ತಿದೆ! ಇದರಲ್ಲಿ ೪೧,೪೪೪ ಹೆಕ್ಟೇರ್ ಅರಣ್ಯವೂ ಸೇರಿದೆ.

ಭಾಕ್ರಾ ಜಲಾಶಯದ ವಿಷಯದಲ್ಲೂ ಇದೇ ಪುನರಾವರ್ತನೆಗೊಂಡಿದೆ. ೩೭೧ ಹಳ್ಳಿಗಳನ್ನು ಮುಳುಗಿಸಿ, ೪೪,೧೫೩ ಎಕರೆ ವ್ಯವಸಾಯಯೋಗ್ಯ ಭೂಮಿಯನ್ನು ನುಂಗಿ ೩೬,೦೦೦ ಜನರನ್ನು ಒಕ್ಕಲೆಬ್ಬಿಸಿದ ಈ ಯೋಜನೆಯ ನಿರಾಶ್ರಿತರ ಪುನರ್ವಸತೀಕರಣವೂ ಸರಿಯಾಗಿ ನಡೆಯಲಿಲ್ಲ. ಅರ್ಧದಷ್ಟು ಜನರಿಗೆ ಹಣದ ಸಹಾಯ ನೀಡಿದ ಸರಕಾರ ಉಳಿದವರ ಸಮಸ್ಯೆ ನೀಗಿಸಲು ಭಾಕ್ರಾ ಪುನರ್ವಸತೀಕರಣದ ಪ್ರಾಧಿಕಾರ ಸ್ಥಾಪಿಸಿ ಕೈತೊಳೆದುಕೊಂಡಿತು. ಭಾಕ್ರಾ-ಬಿಯಾಸ್ ನದಿಗಳ ಅಣೆಕಟ್ಟಿನ ಯೋಜನೆ ಸಂಬಂಧಪಟ್ಟ ಎರಡು ರಾಜ್ಯಗಳ ನಡುವೆ ಅನಗತ್ಯ ಸಮಸ್ಯೆಗಳನ್ನು ಹುಟ್ಟಿ ಹಾಕಿತು. ಹಿಮಾಚಲ ಪ್ರದೇಶ ಮತ್ತು ಪಂಜಾಬ್ ರಾಜ್ಯಗಳೆರಡಕ್ಕೂ ನೆರವಾಗಲು ಈ ಯೋಜನೆ ಕೈಗೆತ್ತಿಕೊಳ್ಳಲಾಯಿತಾದರೂ ಕೊನೆಗೆ ಹೆಚ್ಚಿನ ಲಾಭ ಪಡೆದದ್ದು ಹಿಮಾಚಲ ಪ್ರದೇಶ. ಮುಳುಗಡೆ ಮತ್ತು ಜನ ಪಲ್ಲಟದ ಪ್ರಮಾಣ ಹೆಚ್ಚಾಗಿ ಕಾಡಿದ್ದು ಪಂಜಾಬ್ ರಾಜ್ಯವನ್ನು.

೧೯೬೪ರಲ್ಲಿ ಕರ್ನಾಟಕದ ಮಂಗಳೂರಿನಲ್ಲಿ ಬಂದರು ನಿರ್ಮಾಣ ಕಾರ್ಯ ಪ್ರಾರಂಭವಾದಾಗ ಮೀನುಕೃಷಿಯಲ್ಲಿ ತೊಡಗಿದ್ದ ೭,೦೦೦ ಕುಟುಂಬಗಳನ್ನು ಯಾವ ಪರಿಹಾರವನ್ನು ನೀಡದೆಯೇ ಅಲ್ಲಿಂದ ಸ್ಥಳಾಂತರಿಸಲಾಯಿತು, ಮುತ್ತೋಡಿಯ ಭದ್ರಾ ಅಭಯಾರಣ್ಯದಲ್ಲಿ ವಾಸವಿದ್ದ ಮೂಲ ನಿವಾಸಿಗಳನ್ನು ಅಲ್ಲಿಂದ ಒಕ್ಕಲೆಬ್ಬಿಸಿ, ಬೇರೊಂದು ಜಾಗದಲ್ಲಿ ನೆಲೆಯೂರುವಂತೆ ಮಾಡಲಾಗಿದೆಯಾದರೂ ಪುನರ್ವಸತಿಯ ಬಗ್ಗೆ ಹೇಳಿಕೊಳ್ಳುವಂತಹ ಸಾಧನೆಯ ಮಾತುಗಳೇನೂ ಇಲ್ಲ. ಇದ್ದುದರಲ್ಲಿ ನಮ್ಮ ಯೋಜನೆ, ಅನುಷ್ಠಾನಗಳು ಸಮರ್ಪಕ ಎಂದು ಸಮಾಧಾನಪಟ್ಟುಕೊಳ್ಳುತ್ತಿರುವ ಹಂತದಲ್ಲೇ ತದಡಿಯ ಸಮಸ್ಯೆ ಬೃಹತ್ತಾಗತೊಡಗಿವೆ. ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿವೆ.

* * *

ನಕ್ಸಲರಿಗೂ, ಉಗ್ರಗಾಮಿಗಳಿಗೂ ಪ್ರಜಾತಂತ್ರದಲ್ಲಿ ಸ್ಥಾನವಿಲ್ಲ.

– ಕೆ.ವಿ. ತಿರುಮಲೇಶ್

ಕರ್ನಾಟಕದಲ್ಲಿ ನಕ್ಸಲ್ ಪಿಡುಗನ್ನು ನಿವಾರಿಸುವುದು ಜನ ತಿಳಿದುಕೊಂಡಷ್ಟು ಸುಲಭವಲ್ಲ. ಭಾರತದ ನಕ್ಸಲಿಸಮ್‌ನ ಆರಂಭ ಏನೇ ಇರಲಿ, ಅದೀಗ ಅಂತಾರಾಷ್ಟ್ರೀಯ ಮಾವೋಯಿಸಮ್‌ನ ಒಂದು ಅಂಗ. ಸೋವಿಯಟ್ ರಶಿಯಾದ ಪತನ ಮತ್ತು ಚೈನಾದಲ್ಲಿ ಮಾವೋಯಿಸಮ್‌ನ ಬದಲಾದ ಇಂದಿನ ಸನ್ನಿವೇಶದಲ್ಲಿ ಮಾವೋಯಿಸಮ್ ಅಲ್ಲಲ್ಲಿ ಬೇರೆಬೇರೆ ಹೆಸರುಗಳಿಂದ ತಲೆಯೆತ್ತುತ್ತಿದೆ. ಅಂತಾರಾಷ್ಟ್ರೀಯ ನೆಲೆಯಲ್ಲಿ ತೀವ್ರಗತಿಯ ಆರ್ಥಿಕ ಬದಲಾವಣೆಗಳು ಆಗುತ್ತಿರುವ ಈ ಸಂದರ್ಭ ಮಾವೋಯಿಸಮ್ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆ. ಆದ್ದರಿಂದ ಅದು ಎರಡು ರೀತಿಯ ತಂತ್ರಗಳನ್ನು ರೂಪಿಸಿಕೊಂಡಿದೆ: ಒಂದು ಚೇರ್‌ಮನ್ ಮಾವೋ ರೂಪಿಸಿದ ಗೆರಿಲ್ಲಾ ಯುದ್ಧ; ಇನ್ನೊಂದು ಚೈನೀಸ್ ಸಾಂಸ್ಕೃತಿಕ ಕ್ರಾಂತಿಯ ನೆರಳಿನಂತಿರುವ ಸದ್ದಿಲ್ಲದ ಸಾಂಸ್ಕೃತಿಕ–ಬೌದ್ಧಿಕ ಹೋರಾಟ. ಮೊದಲನೆಯದು ಅದು ಯುವಜನತೆಯನ್ನು ಉಪಯೋಗಿಸುತ್ತಿದ್ದರೆ, ಎರಡನೆಯದಕ್ಕೆ ಸಾಹಿತಿ–ಬುದ್ಧಿಜೀವಿಗಳನ್ನು ಬಳಸುತ್ತಿದೆ. ಇಂಥ ಈ ಎರಡೂ ಬಗೆಯ ನಕ್ಸಲೀಯರನ್ನು ಕಂಡರೆ ಅನುಕಂಪವೂ ಅಸಮಾಧಾನವೂ ಒಟ್ಟಿಗೇ ಉಂಟಾಗುತ್ತದೆ. ಅನುಕಂಪ ಯಾಕೆಂದರೆ, ಮಾವೋಯಿಸಮ್ ಕೂಡ ಇತಿಹಾಸದ ಪುರೋಗತಿಗೆ ತನ್ನ ಕಾಲದಲ್ಲಿ ಕಾರಣವಾದದ್ದು; ಆದರೆ ಆ ಕಾಲ ಈಗ ದಾಟಿಯಾಗಿದೆ ಎನ್ನುವುದನ್ನು ಅದರ ಹಿಂಬಾಲಕರು ಒಪ್ಪಲು ತಯಾರಿಲ್ಲ. ಅಸಮಾಧಾನ ಯಾಕೆಂದರೆ, ಮಾವೋಯಿಸಮ್‌ನ ಹಸ್ತಕ್ಷೇಪದಿಂದಾಗಿ ಪ್ರಜಾಪ್ರಭುತ್ವದ ಚಲನೆಗೆ ತೊಂದರೆಯುಂಟಾಗಿರುವುದು. ಆದರೆ ನಕ್ಸಲೀಯರು ಇದಕ್ಕೆ ಪ್ರತಿಯಾಗಿ "ಯಾರಿಗೆ ಬಂತು, ಎಲ್ಲಿಗೆ ಬಂತು, ನಲವತ್ತೇಳರ ಸ್ವಾತಂತ್ರ್ಯ?" ಎಂದು ಕವಿವಾಣಿಯನ್ನು ಉದ್ಧರಿಸಬಹುದು. ಇದು ಕೇಳತಕ್ಕಂಥ ಪ್ರಶ್ನೆಯೇ. ವ್ಯತ್ಯಾಸವೆಂದರೆ, ಇಂದಿನ ನಮ್ಮ ಗಣತಂತ್ರವ್ಯವಸ್ಥೆಯಲ್ಲಿ, ಅದು ಎಷ್ಟೇ ಅಸಮರ್ಪಕವಾಗಿದ್ದರೂ, ಇಂಥದೊಂದು ಪ್ರಶ್ನೆಯನ್ನು ಯಾರು ಬೇಕಾದರೂ ಕೇಳಬಹುದಾಗಿದೆ. ಮಾವೋಯಿಸಮ್‌ನಲ್ಲಿ ಇದು ಸಾಧ್ಯವಿಲ್ಲ. ತಿಯಾನನ್‌ಮನ್ ಚೌಕದಲ್ಲಿ ನಿರಾಯುಧ ವಿದ್ಯಾರ್ಥಿಗಳ ಮೇಲೆ ನಡೆದ ಹತ್ಯಾಕಾಂಡವನ್ನು ನೆನಪಿಸಿಕೊಳ್ಳಿ: ಅವರು ಮಾಡಿದ ಒಂದೇ ತಪ್ಪೆಂದರೆ ಮಾವೋಯಿಸಮಿನ ವಿರುದ್ಧ ಪ್ರತಿಭಟಿಸಿದ್ದು! ಸ್ವಾತಂತ್ರ್ಯ ಎಂಬ ಕಲ್ಪನೆಯನ್ನೇ ಕೊಲ್ಲುವ ಮಾವೋವಾದಕ್ಕೆ ಸ್ವಾತಂತ್ರ್ಯದ ಬಗ್ಗೆ ಮಾತಾಡುವ ನೈತಿಕ ಹಕ್ಕೇ ಇರುವುದಿಲ್ಲ.

ಇದರ ತಳಮಳದಲ್ಲೊಂದು ತಾತ್ವಿಕ ಸಂಘರ್ಷ ಅಡಗಿದೆ: ಮಾರ್ಕ್ಸಿಸಮ್ ಪ್ರಕಾರ ಇತಿಹಾಸದ ಅಂತಿಮ ಹಂತದ ರಾಜಕೀಯ ವ್ಯವಸ್ಥೆಯೆಂದರೆ

'ಶ್ರಮಿಕ ವರ್ಗದ ಸರ್ವಾಧಿಕಾರ'. ಇಡೀ ಕಮ್ಯೂನಿಸ್ಟ್ ಚಳುವಳಿಯ ಉದ್ದೇಶವೇ ಈ ಸರ್ವಾಧಿಕಾರದ ಸ್ಥಾಪನೆ. ಗಣತಂತ್ರ ತತ್ವ ಯಾವುದೇ ಸರ್ವಾಧಿಕಾರವನ್ನು ಒಪ್ಪುವುದಿಲ್ಲ; ಇದರ ಪ್ರಕಾರ ಪ್ರಜಾಪ್ರಭುತ್ವವೇ ಅಂತಿಮವಾದ ರಾಜಕೀಯ ಸ್ಥಿತಿ. ಇದಕ್ಕಿಂತ ಉತ್ತಮವಾದ್ದು ಇನ್ನೊಂದು ಇಲ್ಲ. ಇದರ ಅರ್ಥ ಪ್ರಜಾಪ್ರಭುತ್ವ ವರ್ಗ ಸಮಾಜವನ್ನು ಒಪ್ಪುತ್ತದೆ ಎಂದಲ್ಲ; ಹಲವು ವರ್ಗಗಳಿದ್ದೂ ಪ್ರಜಾಪ್ರಭುತ್ವ ಒಂದು ರಾಜಕೀಯ ವ್ಯವಸ್ಥೆಯಾಗಿ ಪ್ರವರ್ತಿಸುವುದು ಸಾಧ್ಯ ಎನ್ನುವುದು. ಮಾರ್ಕ್ಸಿಸಮ್ (ಹಾಗೂ ಅದರ ಉಗ್ರರೂಪವಾದ ಮಾವೋಯಿಸಮ್) ವರ್ಗಸಮರದಲ್ಲಿ ನಂಬಿಕೆಯಿರಿಸುತ್ತದೆ; ಹಾಗೂ ಆಯುಧ ಕ್ರಾಂತಿಯನ್ನು ಪ್ರೋತ್ಸಾಹಿಸುತ್ತದೆ ಮಾತ್ರವಲ್ಲ ಅದೊಂದೇ ದಾರಿ ಎನ್ನುತ್ತದೆ. ಪ್ರಜಾಪ್ರಭುತ್ವ ನಿಧಾನವಾದ, ಸರ್ವಸಮ್ಮತವಾದ ಬದಲಾವಣೆಯಲ್ಲಿ ವಿಶ್ವಾಸವಿರಿಸುತ್ತದೆ; ಹಾಗೂ ಪರಿವರ್ತನೆ ಶಾಂತಯುತವಾಗಿ ನಡೆಯಬೇಕೆಂದು ಬಯಸುತ್ತದೆ; ಪ್ರಜಾಪ್ರಭುತ್ವದಲ್ಲಿ ಆಯುಧಕ್ರಾಂತಿಗೆ ಸ್ಥಾನವಿಲ್ಲ. ಮಾರ್ಕ್ಸಿಸಮ್ ಏಕಪಕ್ಷೀಯವಾದುದು, ಅದು ಕಮ್ಯೂನಿಸ್ಟ್ ಪಾರ್ಟಿಯನ್ನಲ್ಲದೆ ಬೇರೆ ಯಾವ ರಾಜಕೀಯ ಪಕ್ಷವನ್ನೂ ಸಹಿಸದು. ಆದ್ದರಿಂದ ಅದು ಮೊದಲು ಕೊಲ್ಲುವುದು ಭಿನ್ನಾಭಿಪ್ರಾಯವನ್ನು. ಪ್ರಜಾಪ್ರಭುತ್ವವಾದರೆ, ಗಣತಂತ್ರ ವ್ಯವಸ್ಥೆಯನ್ನು ಒಪ್ಪುವ ಯಾವ ಪಕ್ಷವನ್ನಾದರೂ ಮನ್ನಿಸುತ್ತದೆ, ಭಿನ್ನಾಭಿಪ್ರಾಯವನ್ನು ಪುರಸ್ಕರಿಸುತ್ತದೆ. ಆದ್ದರಿಂದ ಏಕಪಕ್ಷೀಯವಾದ ಸರ್ವಾಧಿಕಾರಕ್ಕೆ ಅದರಲ್ಲಿ ಸ್ಥಾನವಿಲ್ಲ. ಭಾರತದಲ್ಲಿ ಇಂದು ಹಲವಾರು ಕಮ್ಯೂನಿಸ್ಟ್ ಪಕ್ಷಗಳು ಕಾಣಿಸುತ್ತಿರುವುದಕ್ಕೆ ಕಾರಣ ಅವು ತಾತ್ಕಾಲಿಕವಾಗಿ ತಮ್ಮ ಕಟು ನಿಲುವನ್ನು ತಡೆದಿರಿಸಿರುವುದು. ಕಮ್ಯೂನಿಸಮ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಚಿಸುವುದರಿಂದ ಅದಕ್ಕೆ ತಾತ್ವಿಕವಾಗಿ ಯಾವುದೇ ರಾಷ್ಟ್ರೀಯ ನಿಷ್ಠೆಯೂ ಇಲ್ಲ; ಆದ್ದರಿಂದ ಅದು ಯುದ್ಧತಂತ್ರವಾಗಿ ಇತರ ಯಾವುದೇ ಉಗ್ರಗಾಮಿ ಸಂಘಟನೆಗಳ ಜತೆ ಕೈ ಜೋಡಿಸುವುದಕ್ಕೆ ಸಿದ್ಧವಿರುತ್ತದೆ. ಅದು ಗುಪ್ತವಾಗಿ ಕೆಲಸ ಮಾಡುವುದರಿಂದ ಇಂಥ ರಾಜಿಗಳು ಅದಕ್ಕೆ ಕಷ್ಟವಲ್ಲ. ಪ್ರಜಾಪ್ರಭುತ್ವ ರಾಷ್ಟ್ರೀಯತೆಯ ಕಲ್ಪನೆಯೊಳಗೇ ಕೆಲಸ ಮಾಡಬೇಕಾಗುತ್ತದೆ. ಹಾಗೂ ಯಾವುದೇ ಕಾರಣಕ್ಕೆ ಅದು ತನ್ನ ಮೌಲ್ಯಗಳ ಕುರಿತಾಗಿ ರಾಜಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದು. ಪ್ರಜಾಪ್ರಭುತ್ವ ಪ್ರಕಟವಾಗಿಯೇ ಕೆಲಸ ಮಾಡುವ ವ್ಯವಸ್ಥೆ. ಅದರಲ್ಲಿ ರಹಸ್ಯಕಾರ್ಯಗಳಿಗೆ ಎಡೆಯಿಲ್ಲ. ಈ ಎರಡೂ ರಾಜಕೀಯ ತತ್ವಗಳ ಮಧ್ಯೆ ಇದೆಲ್ಲಕ್ಕೂ ಮುಖ್ಯವಾದ ಭಿನ್ನತೆಯೊಂದಿದೆ: ಅದೆಂದರೆ, ಮಾವೋಯಿಸಮ್‌ನಲ್ಲಿ ವ್ಯಕ್ತಿ ಸ್ವಾತಂತ್ರ ನಗಣ್ಯ; ಆದ್ದರಿಂದಲೇ ನಕ್ಸಲೀಯರು ಕೊಲ್ಲಲು ತಯಾರಿರುವಂತೆ ಸಾಯಲೂ ತಯಾರಿರುವುದು. ಈ ಮಟ್ಟಿಗೆ ನಕ್ಸಲಿಸಮಿಗೂ ಧಾರ್ಮಿಕ ಉಗ್ರಗಾಮಿಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಇದಕ್ಕೆ ವಿರುದ್ಧವಾಗಿ, ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯ ಬಹುಮುಖ್ಯವಾದಂಥ ಒಂದು ಮೌಲ್ಯ.

ಸಾಹಿತ್ಯ ಕೂಡಾ ಸ್ವಾತಂತ್ರ್ಯವನ್ನು ಬಹುವಾಗಿ ಪ್ರೀತಿಸುವ ಕಾರಣ, ಅದು ಸರ್ವಾಧಿಕಾರವನ್ನು ಎಂದೂ ಪ್ರೋತ್ಸಾಹಿಸದು. ಸರ್ವಾಧಿಕಾರ ಕೂಡಾ ಸಾಹಿತ್ಯವನ್ನು ಸಹಿಸುವುದಿಲ್ಲ. ಮಾರ್ಕ್ಸಿಸಮ್, ಲೆನಿನಿಸಮ್, ಸ್ಟಾಲಿನಿಸಮ್, ಮಾವೋಯಿಸಮ್ ಮುಂತಾದ ಇಸಮುಗಳ ಕೆಳಗೆ ಬರೇ ಪ್ರಚಾರ ಸಾಹಿತ್ಯವಷ್ಟೇ ಸಾಧ್ಯ. ಇಸಮಿಗೆ ಬದ್ಧವಾಗದ ಸಾಹಿತ್ಯ ದಮನಕ್ಕೆ ಒಳಗಾಗುತ್ತದೆ; ಅಂಥ ಸಾಹಿತಿಗಳನ್ನು ಒಂದೋ ದೇಶದ ಜೈಲುಗಳಲ್ಲಿ ಹಾಕಲಾಗುತ್ತದೆ, ಇಲ್ಲವೇ ಗಡೀಪಾರು ಮಾಡಲಾಗುತ್ತದೆ. ಈ ಏಕಾಧಿಪತ್ಯದಲ್ಲಿ ಆಂತರಿಕ ಸ್ವಾತಂತ್ರ್ಯ ಕೂಡಾ ಇಲ್ಲವೆನ್ನುವುದು ಇದರ ಇನ್ನೊಂದು ಕರಾಳ ಮುಖವನ್ನು ತೋರಿಸುತ್ತದೆ. ಇಲ್ಲಿ ಸದಾಕಾಲ ಪರಸ್ಪರ ಕುತ್ತಿಗೆ ಹಿಸುಕುವ ಅಧಿಕಾರ ಸ್ಪರ್ಧೆ ನಡೆಯುತ್ತಲೇ ಇರುತ್ತದೆ. ಸ್ಟಾಲಿನ್ ತನಗಾಗದ ಟ್ರಾಟ್ಸ್ಕಿಯನ್ನು ದೇಶದಿಂದ ಹೊರಹಾಕಿದ್ದು ಮಾತ್ರವಲ್ಲ, ಅಟ್ಟಿಸಿಕೊಂಡು ಹೋಗಿ ಕೊಂದದ್ದು ಈಗ ಚರಿತ್ರೆ. ಕಮ್ಯೂನಿಸಮಿನ ಅತ್ಯಲ್ಪ ಕಾಲದ ಇತಿಹಾಸದಲ್ಲಿ ಇಂಥ ರಾಜಕೀಯ ಕೊಲೆಗಳಿಗೆ ಲೆಕ್ಕಮಿತಿಯಿಲ್ಲ. ಎಡಪಂಥೀಯ ಕನಸುಗಳು ಕಾಣುವುದಕ್ಕೆ ರಮ್ಯವಾಗಿರುತ್ತವೆ; ಆದರೆ ಅವುಗಳ ವಾಸ್ತವ ಬಲಪಂಥೀಯ ಕ್ರೌರ್ಯಕ್ಕಿಂತ ಕಡಿಮೆಯೇನಲ್ಲ. ಒಂದು ಕ್ರೌರ್ಯ ಇನ್ನೊಂದಕ್ಕೆ ಉತ್ತರವೂ ಆಗುವುದು. ಇದೆಲ್ಲ ಇಂದು ಹಳೆಯ ಕಥೆಯಾಗಿಯೂ ಅವಾಸ್ತವವಾಗಿಯೂ ಅನಿಸಬಹುದು. ಇಂದಿನ ನಮ್ಮ 'ನಾಗರೀಕ ಸಮಾಜ'ದಲ್ಲಿ ಇದೆಲ್ಲ ಅಸಾಧ್ಯ ಎನ್ನಬಹುದು. ಈ ಭಾವನೆ ಬರುವುದು ನಿಜ. ಯಾಕೆಂದರೆ ಚರಿತ್ರೆಯ ಗಡಿಯಾರವನ್ನು ಹಿಂದಕ್ಕೆ ಹಾಕುವುದು ಸಾಧ್ಯವಿಲ್ಲ. ಆದರೂ ಮಾವೋವಾದಿಗಳು, ಹಾಗೂ ಅವರನ್ನು ಪ್ರತಿನಿಧೀಕರಿಸುವ ನಕ್ಸಲೀಯರು ಇದಕ್ಕಾಗಿ ಪ್ರಯತ್ನಿಸುತ್ತಲೇ ಇದ್ದಾರೆ.

ಕಮ್ಯೂನಿಸ್ಟ್ ರಷ್ಯಾ ಹಾಗೂ ಚೈನಾಗಳಲ್ಲಿ ಡಿನೌನ್ಸಿಂಗ್ ಎಂಬ ಒಂದು ಆಚರಣೆಯಿತ್ತು. ಇಡೀ ದೇಶವನ್ನು ಕಮ್ಯೂನಿಸ್ಟ್ ಪಾರ್ಟಿ ಆಳುತ್ತಿದ್ದ ಕಾರಣ, ಪಾರ್ಟಿಯ ಕಾರ್ಯಕರ್ತರು ಅಧಿಕಾರದಿಂದ ಏನು ಬೇಕಾದರೂ ಮಾಡಬಹುದಾದಂಥ ಪರಿಸ್ಥಿತಿ ಅದು. ಆದ್ದರಿಂದ ಯಾವನೇ ಕಾರ್ಯಕರ್ತ ತನಗಾಗದವರ ಬಗ್ಗೆ ಪಾರ್ಟಿ ಕಮಿಟಿಗಳಲ್ಲಿ ಚಾಡಿಹೇಳಬಹುದಾಗಿತ್ತು. ಡಿನೌನ್ಸಿಂಗ್ ಎಂದರೆ ಇದೇ. ಪರಿಣಾಮವನ್ನು ಊಹಿಸಿಕೊಳ್ಳಬಹುದು. ಈ ರೀತಿ ಡಿನೌನ್ಸ್ ಮಾಡಲ್ಪಟ್ಟ ವ್ಯಕ್ತಿ ಜೈಲು ಸೇರುತ್ತಾನೆ; ಜನರಲ್ಲಿ ಕಾರ್ಯಕರ್ತರ ಬಗ್ಗೆ ಭಯಭೀತಿ ಜಾಸ್ತಿಯಾಗುತ್ತದೆ. ಹೀಗೆ ಕಮ್ಯೂನಿಸ್ಟ್ ಪಾರ್ಟಿಯ ಶಕ್ತಿ ವರ್ಧಿಸುತ್ತಾ ಇರುತ್ತದೆ. ಇದೆಲ್ಲ ನಡೆಯುವುದು ದೂರದ ದೇಶಗಳಲ್ಲಿ, ನಮ್ಮ ಭಾರತದಲ್ಲಿ ಅಲ್ಲ ಎಂದು ತಿಳಿದುಕೊಂಡ ಭಾರತೀಯರಿಗೆ ೧೯೭೫ರ ತುರ್ತುಪರಿಸ್ಥಿತಿ ಭ್ರಮನಿರಸನ ಮಾಡಿತು. ವಿರೋಧ ಪಕ್ಷದ ಅನೇಕರನ್ನು ಯಾವ ಕಾರಣವಾಗಲಿ, ವಿಚಾರಣೆಯಾಗಲಿ ಇಲ್ಲದೆ ರಾತ್ರೋರಾತ್ರಿ ಸೆರೆಮನೆಯಲ್ಲಿ ತಳ್ಳಲಾಯಿತು. ಜನ ಭಯದಿಂದ ತತ್ತರಿಸಿದರು.

ಹಲವರು ಕಾಣೆಯಾದರು, ಪೋಲೀಸ್ ಮರ್ದನದಲ್ಲಿ ಅಸುನೀಗಿದರು. ನಾಗರಿಕ ಹಕ್ಕುಗಳನ್ನು ಕಸಿಯಲಾಯಿತು. ಎಲ್ಲಾ ಹಕ್ಕುಗಳಿದ್ದುದು ಕಾಂಗ್ರೆಸ್ ಕಾರ್ಯಕರ್ತರಿಗೆ ಮಾತ್ರ. ಊರೂರುಗಳಲ್ಲಿ ಮರಿ ಕಾಂಗ್ರೆಸಿಗರಿಗೆ ಕೂಡಾ ಅಪಾರ ಶಕ್ತಿ ಬಂದುಬಿಟ್ಟಿತು. ಕಮ್ಯೂನಿಸ್ಟ್ ದೇಶಗಳಲ್ಲಿನ ಡಿನೌನ್ಸಿಂಗ್ ಇಲ್ಲೂ ಶುರುವಾಯಿತು. ತುರ್ತುಪರಿಸ್ಥಿತಿಯ ಲಾಭ ಪಡೆದುಕೊಂಡು ಕಾಂಗ್ರೆಸಿಗರು ಎರಡು ವರ್ಷಗಳ ಕಾಲ ನಡೆಸಿದ ಅತ್ಯಾಚಾರಗಳಿಗೆ ಮಿತಿಯಿಲ್ಲ. ಪ್ರತಿಯೊಂದು ಪತ್ರಿಕೆಯೂ ಪ್ರಕಟಣಾಪೂರ್ವ ಸೆನ್ಸರಿಗೆ ಒಳಗಾಗುತ್ತಿತ್ತು ಎಂದರೆ ನಂಬುವುದು ಕಷ್ಟ. ಇದೆಲ್ಲ ಆಗಿ ಈಗ ಒಂದು ತಲೆಮಾರು ಕಳೆದಿದೆ. ನಕ್ಸಲೀಯರ ಬಗ್ಗೆ ಉದಾರವಾಗಿ ಮಾತಾಡುವಾಗ, ಇಷ್ಟು ಬೇಗನೆ ಜನ ಇದನ್ನೆಲ್ಲ ಮರೆತರೇ ಎಂದು ಆಶ್ಚರ್ಯವೂ ಬೇಸರವೂ ಆಗುತ್ತದೆ.

ನಕ್ಸಲೀಯ ಕಾರಣಗಳಲ್ಲಿ ಅನುಕಂಪವಿದ್ದು, ಹಿಂಸಾವಿಧಾನವನ್ನು ಒಪ್ಪದಿರುವ ಸಾಹಿತಿಗಳ ದೊಡ್ಡ ಬಳಗವಿದೆ. ಇವರೆಲ್ಲರೂ ಸಮಾಜ ಜೀವನದಲ್ಲಿ ಬದಲಾವಣೆಯನ್ನು ಬಯಸುವವರೇ. ಹಾಗೂ ಅದೇ ಕಾಳಜಿಯಿಂದ ಬರೆಯುತ್ತಿರುವವರು. ಆದರೆ ಈಗ ನಕ್ಸಲೀಯರು ಅವರಿಂದ ಮಾತುಗಳನ್ನು ಕದ್ದುಕೊಂಡಿದ್ದಾರೆ. ಯಾಕೆಂದರೆ, ಬಂದೂಕು ಹಿಡಿದವನ ಮುಂದೆ 'ಖಡ್ಗವಾಗಲಿ ಕಾವ್ಯ' ಎಂಬ ಮಾತು ಅರ್ಥಹೀನವೂ, ಕೊಲ್ಲುವವನ ಮುಂದೆ 'ಇಕ್ರಲಾ ವದೀಲ್ರಾ' ಎಂಬ ಮಾತು ಅನಗತ್ಯವೂ ಆಗುತ್ತದೆ. ಸಾಹಿತ್ಯ ನಿಂತಿರುವುದೇ ರೂಪಕ ಶಕ್ತಿಯ ಮೇಲೆ. ಆದರೆ ಓದುಗ 'ರೂಪಕ ಭ್ರಮೆ'ಗೆ ಒಳಗಾದಾಗ ಸಾಹಿತ್ಯ ಅಪ್ರಸ್ತುತವಾಗುತ್ತದೆ ಹಾಗೂ ಸಾಹಿತಿ ನಿರುತ್ತರನಾಗುತ್ತಾನೆ. ಯಾವುದೇ ಸಂದರ್ಭದಲ್ಲೂ ಸಾಹಿತ್ಯ ಮಾನಸಿಕ ಜಾಗರಣೆಯನ್ನು ಬಯಸುತ್ತದೆಯೇ ವಿನಾ ಉಗ್ರಗಾಮಿತ್ವವನ್ನಲ್ಲ. ಬಹುಳತ್ವದಲ್ಲಿ ಜನಿಸುವ ಮತ್ತು ಅದರಲ್ಲೇ ಉಸಿರಾಡುವ ಸಾಹಿತ್ಯಕ್ಕೆ ಉಗ್ರಗಾಮಿತ್ವ ಆಜನ್ಮ ವೈರಿ.

ಆದರೂ ಈ ಸಾಹಿತಿಗಳಿಗೂ ಎಲ್ಲಿ ತಮ್ಮ ಬರಹಗಳು ಉಗ್ರಗಾಮಿತ್ವಕ್ಕೆ ಕಾರಣವಾದಾವೋ ಎಂದು ಆತಂಕ ಉಂಟಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಅಯರ್ಲೆಂಡಿನಲ್ಲಿ ೧೯೧೬ರ ಈಸ್ಟರ್ ಸ್ವಾತಂತ್ರ್ಯ ಹೋರಾಟದಲ್ಲಿ ನಡೆದ ಮಾರಣಹೋಮವನ್ನು ಕಂಡು ಕವಿ ಯೇಟ್ಸ್‌ಗೆ ಹೀಗೆನಿಸಿದ್ದಿದೆ. ಐರ್ಲೆಂಡಿನ ಸಾಂಸ್ಕೃತಿಕ ಪುನರುತ್ಥಾನಕ್ಕೆ ಅಪಾರ ಕೊಡುಗೆ ನೀಡಿದ್ದ ಯೇಟ್ಸ್ ಆ ದೇಶದ ವಿಮೋಚನೆಯನ್ನು ಬಯಸಿದ್ದರೂ ಅದು ಮಾತುಕತೆಗಳ ಮೂಲಕ, ಶಾಂತಿಯುತವಾಗಿ ನಡೆಯಬೇಕೆಂದು ಅಪೇಕ್ಷಿಸಿದ್ದ. ಐರಿಶ್ ಸ್ವಾತಂತ್ರ್ಯ ಪ್ರೇಮಿಗಳು ಆಯುಧ ಹಿಡಿದು ಬ್ರಿಟಿಷರ ವಿರುದ್ಧ ಹೋರಾಡಿ ಕೊಲ್ಲುವುದಾಗಲಿ ಕೊಲ್ಲಿಸಿಕೊಳ್ಳುವುದಾಗಲಿ ಅವನಿಗೆ ಬೇಕಿರಲಿಲ್ಲ. ಈ ಈಸ್ಟರ್ ದಂಗೆಯಲ್ಲಿ ಆದದ್ದೂ ಅದೇ. ಈ ಹಿಂದೆ ನಾಟಕವೊಂದರಲ್ಲಿ ಐರಿಶ್ ಮಾತೆಯ ಬಾಯಿಯಿಂದ ಉಗ್ರ ರಾಷ್ಟ್ರಪ್ರೇಮದ ಮಾತುಗಳನ್ನು ಯೇಟ್ಸ್ ಹೇಳಿಸಿದ್ದ. ಇದನ್ನು ನೆನಪಿಸಿಕೊಂಡು

ಯೇಟ್ಸ್ ಮರುಗುತ್ತಾನೆ. "ಈಸ್ಟರ್ ೧೯೧೬" ಎಂಬ ಕವಿತೆಯಲ್ಲಿ ನಾವು ಕಾಣುವ ಕವಿಯ ತಲ್ಲಣದ ಹಿನ್ನೆಲೆ ಇದು. ಆದರೆ ಈ ಸ್ವಾತಂತ್ರ್ಯ ಹೋರಾಟಗಾರರ ಹುತಾತ್ಮತೆ ಅನಗತ್ಯವಾಗಿದ್ದರೂ, ಪರಿಣಾಮವಾಗಿ A terrible beauty is born (ಘೋರ ಸೌಂದರ್ಯವೊಂದು ಜನಿಸಿದೆ) ಎನ್ನುತ್ತಾನೆ ಕವಿ. ಈ ಐರಿಶ್ ಸ್ವಾತಂತ್ರ್ಯ ಹೋರಾಟಗಾರರ ಜತೆ ನಕ್ಸಲೀಯರನ್ನು ಹೋಲಿಸುವುದು ಆಭಾಸವಾಗುತ್ತದೆ: ಯಾಕೆಂದರೆ, ಐರಿಶ್ ಹೋರಾಟಗಾರರು ತಮ್ಮ ದೇಶದ ಬಿಡುಗಡೆಗಾಗಿ ಪ್ರಾಣ ತೆತ್ತವರು; ನಕ್ಸಲೀಯರು ತಮ್ಮದೇ ರಾಜ್ಯಸ್ಥಾಪನೆಗಾಗಿ ಹಿಂಸೆಗೆ ಇಳಿದಿದ್ದಾರೆ. ನಕ್ಸಲೀಯರಿಂದ ಮಾತ್ರ ಯಾವ ಸೌಂದರ್ಯವೂ ಹುಟ್ಟುವುದಿಲ್ಲ, ಇನ್ನಷ್ಟು ಘೋರತೆ ಮಾತ್ರ ಜನಿಸುತ್ತದೆ.

ಸಾಹಿತ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಅವಿನಾಭಾವ ಸಂಬಂಧ. ಎರಡೂ ಬಹುಳತ್ವವನ್ನು ಒಪ್ಪಿಕೊಂಡಂಥವು; ಎರಡೂ ಸರ್ವಾಧಿಕಾರದ ವಿರೋಧಿಗಳು. ಕಟ್ಟಾ ಮಾರ್ಕ್ಸಿಸ್ಟ್ ಸಾಹಿತ್ಯವಲ್ಲದೆ, ಇನ್ನು ಯಾವ ಸಾಹಿತ್ಯವೂ ಏಕಪಕ್ಷೀಯತೆಯನ್ನಾಗಲಿ, ಸರ್ವಾಧಿಕಾರವನ್ನಾಗಲಿ ಪ್ರೋತ್ಸಾಹಿಸುವುದಿಲ್ಲ. ಒಂದು ಕತೆಯಾಗಲಿ, ಕಾದಂಬರಿಯಾಗಲಿ ಆರಂಭದಿಂದಲೇ ಬಹುಳತ್ವಕ್ಕೆ ಎಡೆಮಾಡಿಕೊಡುವಂಥದು-- ಕಥನದಲ್ಲಿ ಮಾತ್ರವಲ್ಲ, ಓದುಗ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಕೂಡಾ ಅರ್ಥಬಾಹುಳ್ಯವಿರುತ್ತದೆ. ಕಾದಂಬರಿಯೆಂದರೆ ಅದೊಂದು ಸಂತೆಯ ಹಾಗೆ, ವೈವಿಧ್ಯತೆಯ ಸಂಕೀರ್ಣ ಎನ್ನುತ್ತಾನೆ ಬಕ್ತೀನ್. ಇನ್ನು ಕವಿತೆಯಾದರೆ, ಅದು ಮನುಷ್ಯನ ಸೂಕ್ಷ್ಮ ಒಳಧ್ವನಿಯ ಪ್ರಕಟಣೆ. ಸಾಹಿತ್ಯದ ಎಲ್ಲಾ ಪ್ರಕಾರಗಳೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜಕ್ಕೆ ಅತ್ಯಗತ್ಯವಾದ ಸೂಕ್ಷ್ಮತೆಗಳನ್ನು ನೀಡುವಂಥವು. ಬಂದೂಕು ಹಾಗಲ್ಲ; ಅದು ಅತ್ಯಂತ ಒರಟಾದ ಖಂಡತುಂಡ ಹತ್ಯಾರ. ಸಾಹಿತ್ಯ ಅದನ್ನು ಯಾವ ಕಾರಣಕ್ಕೂ ಬೆಂಬಲಿಸದು.

ನಕ್ಸಲರನ್ನು ಬೆಂಬಲಿಸುವ ಬುದ್ಧಿಜೀವಿಗಳು ಅರಿತುಕೊಳ್ಳಬೇಕಾದ ವಿಷಯ: ಗಣತಂತ್ರ ಎಷ್ಟು ಕೆಟ್ಟಿದ್ದರೂ ಮಾವೋಯಿಸಮಿನಷ್ಟು ಕೆಟ್ಟಿರುವುದಿಲ್ಲ. ಯಾಕೆಂದರೆ ಗಣತಂತ್ರದಲ್ಲಿ ಮಾತಿನ ಹಕ್ಕು ಇರುತ್ತದೆ; ಅದು ಮಾವೋ ವ್ಯವಸ್ಥೆಯಲ್ಲಿ ಇರುವುದಿಲ್ಲ. ಆದ್ದರಿಂದ ಇತಿಹಾಸದ ಗತಿಯಲ್ಲಿ ಮಾವೋಯಿಸಮ್ ಒಂದು ಪಳೆಯುಳಿಕೆ. ನಕ್ಸಲೀಯರು ತಾವು ಪ್ರಜಾಪ್ರಭುತ್ವದ ವಿರೋಧಿಗಳಲ್ಲ ಎಂದು ಹೇಳಿಕೊಂಡರೂ ಆಯುಧ ಕೈಗೆತ್ತಿಕೊಂಡ ತಕ್ಷಣ ಅವರು ಪ್ರಜಾಪ್ರಭುತ್ವ ವಿರೋಧಿಗಳೇ ಆಗುತ್ತಾರೆ. ಪರಿಪೂರ್ಣ ಪ್ರಜಾಪ್ರಭುತ್ವಕ್ಕೆ ಇದೊಂದು ತಾತ್ಕಲಿಕವೂ ಅನಿವಾರ್ಯವೂ ಆದ ಹೆಜ್ಜೆ ಎನ್ನಬಹುದು. ಆದರೆ ಎಲ್ಲಿ ಆಪಾದಕರೂ ನ್ಯಾಯಾಧೀಶರೂ ಒಬ್ಬರೇ ಆಗಿರುತ್ತಾರೋ ಅಲ್ಲಿ ಪ್ರಜಾಪ್ರಭುತ್ವ ಇರುವುದಿಲ್ಲ, ಸರ್ವಾಧಿಕಾರ ಮಾತ್ರ ಇರುತ್ತದೆ.

– ಸಾಭಾರ : ವಿಜಯ ಕರ್ನಾಟಕ

ಜನಪದ ವ್ಯಕ್ತಿ



ಟಾಲ್‌ಸ್ಟಾಯ್

(ಆಗಸ್ಟ್ ೨೮ ಟಾಲ್‌ಸ್ಟಾಯ್‌ರವರ ಜನ್ಮದಿನ. ಅವರ ಸ್ಮರಣೆಗಾಗಿ ಈ ಲೇಖನ)

ಈಗ್ಗೆ ನೂರಾಎಪ್ಪತ್ತೊಂಭತ್ತು ವರ್ಷಗಳ ಹಿಂದೆ ಟಾಲ್‌ಸ್ಟಾಯ್‌ನ ಜನನವಾಯಿತು. ವರ್ಷಗಳೇನೋ ಉರುಳಿದವು. ಪ್ರಪಂಚದಲ್ಲಿ ಹಲವಾರು ತಲೆಮಾರುಗಳೂ ಆಗಿಹೋದವು. ಆದರೆ ಅವನು ತನ್ನ ಎಂಭತ್ತೆರಡು ವರ್ಷಗಳ ಬದುಕಿನ ಅನುಭವದ ಬೆಳಕಿನಲ್ಲಿ ಹೇಳಿದ ಮಾತುಗಳು, ವಿಚಾರಗಳು ಇಂದಿಗೂ ಪ್ರಸ್ತುತವೆನಿಸುತ್ತವೆಂಬುದರಲ್ಲಿಯೇ ಟಾಲ್‌ಸ್ಟಾಯ್‌ನ ಹೆಗ್ಗಳಿಕೆ ಇದೆ. ಓರ್ವ ಯೋಧನಾಗಿ ರಣರಂಗದಲ್ಲಿ ಹೋರಾಡಿ ಯುದ್ಧದ ಬಗ್ಗೆ ಮನುಷ್ಯನೂ, ಸರ್ಕಾರಗಳೂ ಇಟ್ಟುಕೊಂಡಿರುವ ಮೋಹದ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ಕೋವಿಯ ಮೂಲಕ, ಯುದ್ಧಗಳ ಮೂಲಕ, ಕಾಳಗಗಳ ಮೂಲಕ, ಸೈನಿಕ ಕಾರ್ಯಾಚರಣೆಗಳ ಮೂಲಕ ಯಾವ ಉದ್ದೇಶ್ಯಗಳನ್ನೂ ಸಾಧಿಸಲಾಗದೆಂದು ನಿರ್ಭೀತವಾಗಿ ಹೇಳಿದ. ಧರ್ಮಗಳ ಕರ್ಮಠತೆಯನ್ನೂ, ಧರ್ಮ ಗುರುಗಳ ಆಷಾಢಭೂತಿತನವನ್ನೂ ಬಲವಾಗಿ ಖಂಡಿಸಿದ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಕಾರಣದಿಂದ ಮನುಷ್ಯ ದಾನವನಾಗುತ್ತಿದ್ದಾನೆ ಎಂದು ನಿಖರವಾಗಿ ಹೇಳಿದ. ಪ್ರಕೃತಿಯ ಕೂಸಾದ ಮಾನವ ತನ್ನ ಸ್ವಾರ್ಥದ ಕಾರಣದಿಂದಾಗಿ ಅದನ್ನು ಹಾಳುಗೆಡವುತ್ತಿರುವುದಕ್ಕಾಗಿ ಕಣ್ಣೀರಿಟ್ಟ.

ಇಂದಿನ ವಿಜ್ಞಾನ ಯುಗದಲ್ಲಿ ವಿಶ್ವ ಒಂದು ಹಳ್ಳಿಯಾಗುತ್ತಿದೆ ಎಂದು ಇಂದಿನ ಎಲ್ಲ ದೇಶಗಳ ನಾಯಕರು ಹೇಳುತ್ತಿದ್ದರೂ ವಿಶ್ವ ಒಂದು ಹಳ್ಳಿಯೆಂಬ ಕಲ್ಪನೆಗೇ ಕುಠಾರಪ್ರಾಯ ಏಟನ್ನು ಕೊಡುವ ರಾಷ್ಟ್ರೀಯವಾದವನ್ನೂ ಅವರು ಪ್ರೋತ್ಸಾಹಿಸುತ್ತಿದ್ದಾರೆ. ಆ ವಾದಕ್ಕೆ ದೇಶಾಭಿಮಾನವೆಂಬ ಸಜ್ಜನಿಕೆಯ ಪೋಷಾಕನ್ನು ಹಾಕುತ್ತಾ ಒಂದು ದೇಶ ಇನ್ನೊಂದು ದೇಶದ ವೈರಿಯಾಗುವಂತೆ ಮಾಡುತ್ತಿದ್ದಾರೆ. ಈ ವಿಪರ್ಯಾಸವನ್ನು ಟಾಲ್‌ಸ್ಟಾಯ್ ತನ್ನ ಜೀವಿತಕಾಲದಲ್ಲಿ ತನ್ನ ಬರವಣಿಗೆಯ ಮೂಲಕ ಅಪಹಾಸ್ಯಕ್ಕೆ ಈಡು ಮಾಡಿದ್ದ. ತನ್ನ ವಿಚಾರಕ್ಕೆ ಬೆಂಬಲವನ್ನೀಯುವ ಇತರ ವಿಚಾರವಂತರ ವಿಚಾರಗಳ ನೆರವನ್ನೂ ಪಡೆದಿದ್ದ. ಅಂಥ ವಿಚಾರಕರಲ್ಲಿ ಇ.ಬೆಲ್‌ಫೋರ್ಟ್ ಬಾಕ್ಸ್ ಎಂಬುವವರೂ ಕೂಡ. ಟಾಲ್‌ಸ್ಟಾಯ್ ಬೆಲ್‌ಪೋರ್ಟ್ ಬಾಕ್ಸ್‌ರವರ ಈ ಮುಂದಿನ ಮಾತನ್ನು ತನ್ನ

ಒಂದು ಲೇಖನದ ಪ್ರಾರಂಭಕ್ಕೆ ಉದ್ಧರಿಸುತ್ತಾನೆ. ಆ ಮಾತು ಈ ಪ್ರಕಾರವಿದೆ: "ಒಬ್ಬ ವ್ಯಕ್ತಿಯನ್ನು ದೇಶಪ್ರೇಮಿಯೆಂದು ಕರೆಯುವುದು ಆತನಿಗೆ ನೀವು ಮಾಡಬಹುದಾದ ಘೋರ ಅಪಮಾನವೆಂದು ಪರಿಗಣಿಸಬಹುದಾದ ಕಾಲ ಹತ್ತಿರ ಬರುತ್ತಿದೆ. ದೇಶಪ್ರೇಮವೆಂದರೆ ಈಗ ಇರುವ ಅರ್ಥದ ಪ್ರಕಾರ ಪಟ್ಟಭದ್ರ ಹಿತಾಸಕ್ತ ವರ್ಗದವರಿಗೆ ಅನುಕೂಲವಾಗುವಂತೆ ನಾವು ಹುಟ್ಟಿರುವ ದೇಶವೊಂದರ ವ್ಯವಸ್ಥೆಯನ್ನು ಕೊಳ್ಳೆಹೊಡೆಯುವ ಅವಕಾಶವೇ ಆಗಿದೆ." ಈ ಮಾತು ಇಂದಿನ ಕಾಲಕ್ಕೂ ಎಷ್ಟು ಶಬ್ದಶಃ ಒಪ್ಪುತ್ತದೆಂದು ವಿವರಣಾತ್ಮಕವಾಗಿ ಹೇಳುವ ಅಗತ್ಯವಿಲ್ಲ. ಆದರೂ ಹೇಳದೆ ವಿಧಿಯಿಲ್ಲ. ಅಮೇರಿಕಾ ಇಂದು ಪ್ರಪಂಚದಾದ್ಯಂತ ನಡೆಸುತ್ತಿರುವ ಪೋಲಿಸ್‌ಗಿರಿ; ಭಾರತ ಮತ್ತು ಪಾಕಿಸ್ತಾನಗಳ ಮಧ್ಯದ ಅರ್ಧ ಶತಮಾನದಷ್ಟೇ ದೀರ್ಘಕಾಲದ ಅಘೋಷಿತ ಯುದ್ಧ; ಇಸ್ರೈಲ್ ಮತ್ತು ಪ್ಯಾಲೆಸ್ಟೈನಿನ ಮಧ್ಯ ನಡೆಯುತ್ತಿರುವ ಸುಮಾರು ಒಂದು ನೂರು ವರ್ಷದ ಅವಧಿಯ ಯುದ್ಧ; ಉತ್ತರ-ಕೊರಿಯಾ ಮತ್ತು ದಕ್ಷಿಣ ಕೊರಿಯಾಗಳ ಮಧ್ಯದ ವೈಷಮ್ಯ; ಚೀಣಾ ಮತ್ತು ತೈವಾನ್‌ಗಳ ಮಧ್ಯದ ಐವತ್ತು ವರ್ಷಗಳ ವೈಷಮ್ಯ; ಚೀಣಾ ಮತ್ತು ಭಾರತ ಮಧ್ಯದ ದೀರ್ಘಾವಧಿಯ ವೈಷಮ್ಯ ಹಾಗೂ ಸಿಂಹಳೀಯರ ಮತ್ತು ತಮಿಳು ಟೈಗರ್‍ಸ್ ಮಧ್ಯದ ಹೋರಾಟ ಈ ಮುಂತಾದ ಘಟನೆಗಳ ಹಿಂದೆ ಕೆಲಸ ಮಾಡುತ್ತಿರುವ ಪ್ರೇರಣೆ ರಾಷ್ಟ್ರೀಯವಾದವೇ ಆಗಿದೆ. ವಿಶ್ವ ಒಂದು ಹಳ್ಳಿ ಎಂದು ಸಾರುತ್ತಾ ದೇಶ-ದೇಶಗಳ ಮಧ್ಯ ಪಟ್ಟಭದ್ರ ಹಿತಾಸಕ್ತ ವರ್ಗಗಳ ಕೈವಾಡದಿಂದ ಗೋಡೆಗಳನ್ನು ನಿರ್ಮಿಸುತ್ತಾ ಸಾಗಿದ್ದೇವೆ. ಈ ಮನೋವೃತ್ತಿಗೆ ಟಾಲ್‌ಸ್ಟಾಯ್ ಬಲವಾದ ಏಟು ಕೊಡಲು ಪ್ರಯತ್ನಿಸಿದ್ದಾನೆ. ಎಲ್ಲೆಡೆಯೂ ಧರ್ಮಾಂಧತೆ ಮತ್ತು ರಾಷ್ಟ್ರೀಯವಾದ ಬೆಳೆಯುತ್ತಿರುವ ಈ ಕಾಲದಲ್ಲಿ ರಾಷ್ಟ್ರೀಯವಾದ ಅಥವಾ ದೇಶಾಭಿಮಾನದ ವಿರುದ್ಧದ ಟಾಲ್‌ಸ್ಟಾಯ್‌ನ ವಿಚಾರಗಳು ಮನನೀಯವಾಗಿವೆ.

ಇನ್ನು ಸರ್ಕಾರಕ್ಕೆ ಸಂಬಂಧಿಸಿದ ಟಾಲ್‌ಸ್ಟಾಯ್‌ನ ವಿಚಾರಗಳಂತೂ ಅವನು ನಮ್ಮೀ ೨೧ನೇ ಶತಮಾನದಲ್ಲಿದ್ದುಕೊಂಡೇ, ಇಂದಿನ ಎಲ್ಲ ಬಗೆಯ ಸರ್ಕಾರಗಳ ಕಾರ್ಯ ವೈಖರಿಯನ್ನು ನೋಡೇ ಹೇಳಿದಂತಿವೆ. ಉದಾಹರಣೆಗೆ ಈ ಕೆಲವು ಮಾತುಗಳನ್ನು ಗಮನಿಸಬಹುದು. "ಮಿಲಿಟರಿ ಸರ್ಕಾರಗಳು ಮಾತ್ರವಲ್ಲ, ಎಲ್ಲ ಸರ್ಕಾರಗಳೂ ನಿರುಪಯುಕ್ತವಾಗಿವೆ. ಸರ್ಕಾರಗಳು

ಯಾವಾಗಲೂ ಪವಿತ್ರತೆಗೆ ತೀರಾ ವಿರೋಧವಾಗಿರುವ ಅಂಶಗಳಿಂದಲೇ ಕೂಡಿರುತ್ತವೆ. ಅತ್ಯಂತ ಉದ್ಧಟರೂ, ನಿರ್ಲಜ್ಜರೂ ಮತ್ತು ವಕ್ರಬುದ್ಧಿಯುಳ್ಳ ಜನರೇ ಅಲ್ಲಿರುತ್ತಾರೆ. ಆದುದರಿಂದ ಅಧಿಕಾರವನ್ನು ವಹಿಸಿಕೊಂಡ ಮಿಲಿಟರಿ ಸರ್ಕಾರವಂತೂ ಅತ್ಯಂತ ಅಪಾಯಕಾರಿ ವ್ಯವಸ್ಥೆ ಎಂದು ಹೇಳಬಹುದಾಗಿದೆ."

ಟಾಲ್‌ಸ್ಟಾಯ್ ಯಾವಾಗಲೂ ಇಡೀ ಸಮಾಜದ ಹಿತ ಚಿಂತನೆ ಮಾಡಿದ. ಧರ್ಮ, ಯುದ್ಧ, ಹಿಂಸೆ, ಸರ್ಕಾರ, ಸತ್ಯ ಇತ್ಯಾದಿಯಾಗಿ ಅವನು ಆಲೋಚಿಸದೇ ಇದ್ದ ವಿಷಯವೇ ಇರಲಿಲ್ಲ. ಇಂಥ ಎಲ್ಲ ವಿಷಯಗಳನ್ನು ಕೇವಲ ಭಾವನಾತ್ಮಕವಾಗಿ ಹೇಳದೆ ಅವುಗಳನ್ನು ಬೌದ್ಧಿಕ ಹಾಗೂ ತಾರ್ಕಿಕ ಪ್ರಕ್ರಿಯೆಯ ಒರೆಗಲ್ಲ ಮೇಲೆ ಉಜ್ಜಿ ವಿಮರ್ಶಾತ್ಮಕವಾಗಿ ಮಂಡಿಸುತ್ತಿದ್ದ.

ಟಾಲ್‌ಸ್ಟಾಯ್ ಹೇಗೆ ಇಂದಿನ ಕಾಲಕ್ಕೂ ಪ್ರಸ್ತುತವಾಗಿದ್ದಾನೆ ಎನ್ನುವುದಕ್ಕೆ ಈಗ್ಗೆ ೧೧೭ ವರ್ಷಗಳ ಹಿಂದೆ 'ಮನುಷ್ಯರು ಮತ್ತು ಬರಿಸಿಕೊಳ್ಳುವುದೇಕೆ' ಎಂಬ ಸುದೀರ್ಘವಾದ ಪ್ರಬಂಧವನ್ನು ಬರೆದು ನಶೆಗಳ ಬಗ್ಗೆ ಇರುವ ಮಾನವನ ದೌರ್ಬಲ್ಯಗಳ ಮೇಲೆ ಬಹುವಾಗಿ ಬೆಳಕನ್ನು ಚೆಲ್ಲಿ, ಮಾನವ ಮತ್ತುಗಳು ಬರುವ ಪೇಯಗಳ ಕುಡಿಯುವಿಕೆಯಿಂದಾಗಿ ಖಂಡಿತವಾಗಿಯೂ ಬಿಡುಗಡೆ ಹೊಂದುತ್ತಾನೆ ಎಂಬ ಆಶಾಭಾವನೆ ವ್ಯಕ್ತಪಡಿಸುತ್ತಾನೆ. ಇಂದು ಎಲ್ಲ ರಾಜ್ಯಗಳಲ್ಲಿ ಮದ್ಯಪಾನ ನಿಷೇಧ ಜಾರಿಗೆ ಬರುತ್ತಿರುವ ಸಂದರ್ಭದಲ್ಲಿ ಟಾಲ್‌ಸ್ಟಾಯ್ ಹೇಳಿದ ಈ ಮಾತುಗಳು ಎಷ್ಟು ಸಮಂಜಸವಾಗಿವೆ ಮತ್ತು ಅವು ಹೇಗೆ ಮದ್ಯಪಾನ ನಿಷೇಧದ ವಿಚಾರಕ್ಕೆ ಸಮರ್ಥನೆಯನ್ನೀಯುತ್ತವೆ ಎಂಬುದನ್ನು ಕಾಣಬಹುದು. ಟಾಲ್‌ಸ್ಟಾಯ್ ಹೇಳಿದ ಮಾತುಗಳು ಇಂತಿವೆ: " ಮಾನವಕುಲ ಈ ದಿನಗಳಲ್ಲಿ ಅಧೋಗತಿಗಿಳಿದಂತೆ ತೋರುತ್ತದೆ. ಅದರ ಅರಿವು ಆಗದಿರುವುದಕ್ಕೆ ಯಾವುದೋ ಬಾಹ್ಯ ಕಾರಣವಿರಬೇಕೆಂದು ತೋರುತ್ತದೆ. ಆ ಕಾರಣ ಅದೊಂದೇ ಇಲ್ಲದಿರಬಹುದು. ಆದರೆ ಅದೇ ಅತಿ ಮುಖ್ಯಕಾರಣ– ನಮ್ಮ ಸಮಾಜದಲ್ಲಿನ ಹೆಚ್ಚುಪಾಲು ಜನತೆಯನ್ನು ವಶಮಾಡಿಕೊಂಡಿರುವ ದ್ರಾಕ್ಷಾರಸ, ತಂಬಾಕುಗಳಿಂದ ಒದಗುವ ಪ್ರಜ್ಞಾಹೀನ ಸ್ಥಿತಿ.

ಈ ಘೋರ ವಿಪತ್ತಿನಿಂದ ಬಿಡುಗಡೆಯುಂಟಾದರೆ ಮಾನವನ ಇತಿಹಾಸದಲ್ಲೇ ಒಂದು ಹೊಸಯುಗ ಪ್ರಾರಂಭವಾದಂತೆ.

ಆ ಕಾಲವು ಸನ್ನಿಹಿತವಾಗಿದೆ ಎಂದು ತೋರುತ್ತದೆ. ವಿಪತ್ತನ್ನು

ಕಂಡುಕೊಂಡಿದ್ದಾಗಿದೆ. ನಮ್ಮ ಅರಿವಿನಲ್ಲಿ ಹೊಸತೊಂದು ಪರಿವರ್ತನೆಯಾಗಿದೆ.

ಜನರಿಗೆ ಈ ಮಾದಕ ವಸ್ತುಗಳ ಸೇವನೆಯಿಂದಾಗುವ ಅಪಾಯದ ಅರಿವು ಆಗಿದೆ, ಅದರ ಬಗೆಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಅರಿವಿನಲ್ಲಾದ ಈ ಸೂಕ್ಷ್ಮ ಪರಿವರ್ತನೆ ಜನರನ್ನು ಮಾದಕ ವಸ್ತುಗಳ ಸೆರೆಯಿಂದ ಪಾರುಮಾಡುವುದು ಖಂಡಿತ. ಈ ಪರಿವರ್ತನೆ ಅವರವರ ಆತ್ಮ ಸಾಕ್ಷಿಯ ತಗಾದೆಗಳತ್ತ ಕಣ್ತೆರೆಯಿಸುತ್ತಿದೆ. ತಮ್ಮ ಗ್ರಹಿಕೆಗನುಸಾರವಾಗಿ ಅವರು ತಮ್ಮ ಬದುಕನ್ನು ತಿದ್ದಿಕೊಳ್ಳಲು ತೊಡಗುತ್ತಾರೆ. ಇದು ಈಗಾಗಲೇ ಪ್ರಾರಂಭವಾಗಿರುವಂತೆ ತೋರುತ್ತದೆ."

ಟಾಲ್‌ಸ್ಟಾಯ್ ಓರ್ವ ರಹಸ್ಯಾನ್ವೇಷಕನಾಗಿ ತನ್ನ ಜೀವನವನ್ನು ಕಳೆದ. ಜೀವನದ ರಹಸ್ಯಾನ್ವೇಷಣೆಯ ತನ್ನ ಅನುಭವಗಳನ್ನು ಈ ಕೆಲ ಮಾತಿನಲ್ಲಿ ಹೇಳಿದ್ದಾನೆ: "ತನಗಾಗಿ ಯಾರೂ ಸುಖವನ್ನು ಬಯಸಬಾರದು; ಸುಖವನ್ನು ಬೇರೆಯವರಿಗಾಗಿ, ಅಂದರೆ ನಮ್ಮ ಹತ್ತಿರದವರಿಗಾಗಿ, ಎಲ್ಲಾ ಮಾನವರಿಗ್ಗಾಗಿ ಬಯಸಬೇಕು" ಎಂದು ಕೆಲವರು ಹೇಳಿದರು. ಇದನ್ನು ನಂಬಲು ಪ್ರಯತ್ನ ಮಾಡಿದೆ. ಆದರೆ ಮನಸ್ಸಿಗೆ ಸಮಾಧಾನ ದೊರಕಲಿಲ್ಲ. ಕಾರಣ, ನಾನು ಎಷ್ಟು ಪ್ರಾಮಾಣಿಕವಾಗಿ ನನ್ನ ಸುಖವನ್ನು ಬಯಸಿದೆನೋ ಅಷ್ಟೇ ಪ್ರಾಮಾಣಿಕವಾಗಿ ಬೇರೆಯವರ ಸುಖವನ್ನು ಬಯಸುವುದು ನನಗೆ ಸಾಧ್ಯವಾಗಲಿಲ್ಲ. ಇದಕ್ಕೂ ಹೆಚ್ಚಾಗಿ ಉಳಿದವರೆಲ್ಲ ನನ್ನಂತೆಯೇ ದುಃಖ ಹಾಗೂ ಸಾವಿಗೆ ಗುರಿಯಾಗಿದ್ದುದರಿಂದ, ಅವರ ಸುಖಕ್ಕಾಗಿ ನಾನು ಮಾಡುವ ಪ್ರಯತ್ನಗಳೆಲ್ಲಾ ವ್ಯರ್ಥ ಎಂದು ಅನ್ನಿಸಿತು.

ನಾನು ಅಸಾಧಾರಣ ಮನುಷ್ಯನಾಗಿರುವುದರಿಂದ ಹೀಗೆ ಕಂಗೆಡುತ್ತಿದ್ದೇನೆ; ಬೇರೆಯ ಜನಕ್ಕೆ ತಾವೇಕೆ ಬದುಕುತ್ತಿದ್ದೇವೆ ಎಂದು ತಿಳಿದಿದೆ; ಅದಕ್ಕೆ ಅವರು ಕಂಗೆಡುವುದಿಲ್ಲ ಎನ್ನುವ ಯೋಚನೆ ಬಂತು. ನಾನು ಇನ್ನೂ ಕಂಗೆಟ್ಟುಹೋದೆ."

ಇಂಥ ವ್ಯಕ್ತಿತ್ವದ ಟಾಲ್‌ಸ್ಟಾಯ್‌ನ ಪ್ರಭಾವ ನಮ್ಮ ಮಹಾತ್ಮ ಗಾಂಧಿಯವರ ಮೇಲೆ ಅಗಾಧವಾಗಿ ಉಂಟಾಗಿತ್ತು. ಗಾಂಧಿಯವರ ಜೀವನ ಚರ್ಯೆ ಬದಲಾಗಲೂ ಕಾರಣವಾಗಿತ್ತು.

- ಸುರೇಂದ್ರ ಕೌಲಗಿ

(ವಿವಿಧ ಮೂಲಗಳಿಂದ)

ಜನಪದ ನಿಲಯದ ಅಂತರಂಗದಲ್ಲಿ – ೪೫



ಜನಪದ ಸೇವಾ ಟ್ರಸ್ಟ್ ತನ್ನ ಪ್ರಾರಂಭದ ದಿನಗಳಿಂದಲೂ ವಿದೇಶಿ ಸ್ವಯಂ ಸೇವಕರನ್ನು ಆಕರ್ಷಿಸುತ್ತ ಬಂದದ್ದು ಒಂದು ವಿಶೇಷವಾದ ಸಂಗತಿ. ಟ್ರಸ್ಟ್ ಹಾಗೆ ನೋಡಿದರೆ ಅದು ಅಂತರಾಷ್ಟ್ರೀಯ ಸಂಸ್ಥೆಯೇನಲ್ಲ. ಗ್ರಾಮ ಮಟ್ಟದ ಸಂಸ್ಥೆ. ಆಗಿನ್ನೂ ವೆಬ್‌ಸೈಟ್‌ಗಳಂಥ ತಾಂತ್ರಿಕ ಬೆಳವಣಿಗೆಯೂ ಆಗಿರಲಿಲ್ಲ. ಯಾವ ಅಂತರರಾಷ್ಟ್ರೀಯ ಇಂಗ್ಲಿಷ್ ಪತ್ರಿಕೆಗಳಲ್ಲೂ ಟ್ರಸ್ಟಿನ ಬಗ್ಗೆ ಲೇಖನಗಳು ಬಂದಿರಲಿಲ್ಲ. ಮೇಲುಕೋಟೆಯಂಥಾ ಒಂದು ಪುಟ್ಟ ಗ್ರಾಮದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡು ಗಾಂಧೀ ವಿಚಾರ ಪ್ರಣೀತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದ ಸಂಸ್ಥೆ. ಆದರೂ ಕೂಡ ಕಾಲ ಕಳೆದಂತೆ ಟ್ರಸ್ಟಿನ ಪರಿಚಯ ದೇಶದ ಹೊರಗಿನ ಕೆಲ ಜನರಿಗೆ ಆಗಿ ಅವರು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಟ್ರಸ್ಟಿಗೆ ಬರಲಾರಂಭಿಸಿದರು ಮತ್ತು ತಮ್ಮದೇ ಆದ ರೀತಿಯಲ್ಲಿ ಟ್ರಸ್ಟಿನ ಬೆಳವಣಿಗೆಗೆ ಸಹಾಯ ಹಸ್ತ ನೀಡುತ್ತಾ ಬಂದರು. ಇದ್ಯಾವುದೂ ಪೂರ್ವ ನಿಯೋಜಿತವಾದುದಾಗಲಿ ಯಾವುದೇ ಒಂದು ಲೆಕ್ಕಾಚಾರವನ್ನಿಟ್ಟುಕೊಂಡು ಮಾಡಿದ್ದಲ್ಲ. ಎಲ್ಲವೂ ಅತ್ಯಂತ ಸಹಜವಾಗಿ ಸ್ವಾಭಾವಿಕವಾಗಿ ಆದದ್ದು. ಅಂಥ ಒಂದು ಉದಾಹರಣೆ ಟ್ರಸ್ಟಿನ ಬಗ್ಗೆ 'Who cares?' ಎಂಬ ಸುಮಾರು ಹದಿನಾರು ನಿಮಿಷದ ಒಂದು ಸಾಕ್ಷ್ಯಚಿತ್ರದ ರಚನೆಯಾದದ್ದು. ಈ ಕೆಲಸಕ್ಕೆ ಕೈ ಹಾಕಿದವರು ಸಾರಾ ಹಾಬ್ಸನ್ ಮತ್ತು ಅವಳ ಪತಿ ಟೋನಿ ಮೇಯರ್. ಇವರಿಬ್ಬರು ಟ್ರಸ್ಟಿನ ಬಗ್ಗೆ ಲಂಡನ್‌ನಲ್ಲಿರುವಾಗಲೆ ಆಕ್ಸ್‌ಫ್ಯಾಮ್ ಎಂಬ ಅಂತರಾಷ್ಟ್ರೀಯ ಸಂಸ್ಥೆಯ ಮೂಲಕ ತಿಳಿದುಕೊಂಡಿದ್ದರು. ಆಕ್ಸ್‌ಫ್ಯಾಮ್ ಸಂಸ್ಥೆಗೆ ಟ್ರಸ್ಟಿನ ಪರಿಚಯವಾದದ್ದು ಹೇಗೆ? ಅದು ಕೂಡ ಸಹಜವಾಗಿಯೇ. ಬೆಂಗಳೂರಿನಲ್ಲಿದ್ದ ಆಕ್ಸ್‌ಫ್ಯಾಮ್ ಪ್ರಾದೇಶಿಕ ಅಧಿಕಾರಿ ಜಾನ್ ಸ್ಟೇನ್ಲಿ. ಅವರು ಇನ್ನು ಯಾರ ಮೂಲಕವೋ ಟ್ರಸ್ಟಿನ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರು. ಒಂದು ದಿನ ಇದ್ದಕ್ಕಿದ್ದಂತೆ ಜನಪದ ನಿಲಯದ ಮುಂದೆ ಬಿಳಿಬಣ್ಣದ ವ್ಯಾನ್ ಬಂದು ನಿಂತಿತು. ಕುತೂಹಲದಿಂದ ಹೊರಗೆ ಬಂದು ನೋಡಲಾಗಿ ಇನ್ನೂ ಯುವಾವಸ್ಥೆಯಲ್ಲಿದ್ದ ಬಿಳಿಬಣ್ಣದ ಬಟ್ಟೆಯನ್ನು ಧರಿಸಿದ್ದ ಓರ್ವ ಸುಂದರ ಇಂಗ್ಲಿಷ್ ಯುವಕ ಒಳಗೆ ಬಂದು ಕುಳಿತುಕೊಂಡ. ಟ್ರಸ್ಟಿನ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ. ಅವನಿಗೆ ಟ್ರಸ್ಟಿನ ಧ್ಯೇಯೋದ್ದೇಶಗಳು ಮತ್ತು ಸರ್ಕಾರದ ಧನ ಸಹಾಯವಿಲ್ಲದೆ ಹಳ್ಳಿಗಾಡಿನಲ್ಲಿದ್ದು ಕೆಲಸ ಮಾಡುತ್ತಿರುವುದು ತುಂಬಾ ಪ್ರಭಾವಬೀರಿತೆಂದೆನಿಸುತ್ತದೆ. ಟ್ರಸ್ಟಿನ ಮುಖ್ಯ ಕಾರ್ಯಕರ್ತರ ಬಗ್ಗೆಯೂ ವಿಷಯವನ್ನು ಸಂಗ್ರಹಿಸಿ ಒಟ್ಟಾರೆ ಟ್ರಸ್ಟಿನ ಬಗ್ಗೆ ತುಂಬಾ ಸದಭಿಪ್ರಾಯವನ್ನು ತನ್ನ ಮನಸ್ಸಿನಲ್ಲಿ ಮೂಡಿಸಿಕೊಂಡ. ಇನ್ನು ಮುಂದೆ ಹೆಚ್ಚನ್ನೇನೂ ತಿಳಿಯಬೇಕಾಗಿರಲಿಲ್ಲ. ಆ ತಕ್ಷಣವೇ ಟ್ರಸ್ಟಿನ ಕರುಣಾಗೃಹದ ಬಾವಿಗೆ ಒಂದು ನೀರೆತ್ತುವ ಯಂತ್ರ ಹಾಗೂ

ಟ್ರಸ್ಟಿನ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲು ನೆರವಾಗುವಂತೆ ಮುದ್ರಣ ಯಂತ್ರವನ್ನು ಕೊಡುವುದಾಗಿ ಹೇಳಿದ. ಮುಂದೆ ಕೆಲವೆ ದಿನಗಳಲ್ಲಿ ಅದಕ್ಕೆ ಸಂಬಂಧಿಸಿದ ಹಣ ಕೈಸೇರಿತು. ಹೀಗೆ ಆಕ್ಸ್‌ಫ್ಯಾಮ್‌ನ ಮೂಲಕ ಸಾರಾ ಹಾಬ್ಸನ್ ಮತ್ತು ಟೋನಿ ಮೇಯರ್ ಟ್ರಸ್ಟಿನ ಬಗ್ಗೆ ತಿಳಿದುಕೊಂಡು ಅದೇ ಆಕ್ಸ್‌ಫ್ಯಾಮ್ ಸಂಸ್ಥೆಯ ನಿಧಿ ಸಂಗ್ರಹಕಾರ್ಯಕ್ಕೆ ನೆರವಾಗಲು ಅನುಕೂಲವಾಗುವಂತೆ ಟ್ರಸ್ಟಿನ ಬಗ್ಗೆ ಸಾಕ್ಷ್ಯಚಿತ್ರ ತಯಾರಿಸಲು ಅವರಿಬ್ಬರು ಮೇಲುಕೋಟೆಗೆ ಬಂದರು. ಸಾರಾ ಹಾಬ್ಸನ್ ಸಾಕ್ಷ್ಯಚಿತ್ರಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಿ ವಿಷಯವಾರು ಅನುಕ್ರಮಣಿಕೆಯನ್ನು ತಯಾರಿಸಿದರೆ ಮೇಯರ್ ಅದನ್ನು ಆಧಾರವಾಗಿಟ್ಟುಕೊಂಡು ಚಿತ್ರೀಕರಿಸುತ್ತಿದ್ದರು. ಇವರಿಬ್ಬರಲ್ಲದೆ ಇನ್ನು ಮೂರ್‍ನಾಲ್ಕು ಜನ ತಾಂತ್ರಿಕ ಸಿಬ್ಬಂದಿಯವರಿದ್ದರು. ಟ್ರಸ್ಟಿನ ಸಾಕ್ಷ್ಯಚಿತ್ರ ತಯಾರಿಸಲು ಸುಮಾರು ಎರಡು–ಮೂರು ತಿಂಗಳು ಬೇಕಾಯಿತು. ಈ ಅವಧಿಯಲ್ಲಿ ಸಾರಾ ಹಾಬ್ಸನ್ ಮತ್ತು ಟೋನಿ ಮೇಯರ್ ಇಬ್ಬರೂ ಟ್ರಸ್ಟಿನ ಕುಟುಂಬದ ಸದಸ್ಯರಾಗಿಬಿಟ್ಟಿದ್ದರು. ಇವರು ಸಾಕ್ಷ್ಯಚಿತ್ರ ತಯಾರಿಸುವಾಗ ಕರ್ನಾಟಕದ ಪ್ರಸಿದ್ಧ ಜಾನಪದ ಸಾಹಿತಿಯಾದ ಗೊ.ರು. ಚನ್ನಬಸಪ್ಪನವರು ಸಹ ಬಂದು ಹೋದರು. ಸಾರಾ ಮತ್ತು ಮೇಯರ್ ಆಗಲೆ ಇಂಗ್ಲೆಂಡಿನಲ್ಲಿ ವಿವಾಹವಾಗಿದ್ದರೂ ಸಹ ಅದು ಪಾಶ್ಚಿಮಾತ್ಯ ರೀತಿಯ ವಿವಾಹವಾಗಿತ್ತು. ಅಂದರೆ ಗಂಡ–ಹೆಂಡತಿ ಎಂದು ಇದ್ದರೂ ಇಲ್ಲದಂತಿರುವ ಒಂದು ಸಬಂಧ. ಆದ್ದರಿಂದ ಅವರು ಮೇಲುಕೋಟೆಗೆ ಬಂದು ಭಾರತೀಯ ಸಂಸ್ಕೃತಿಯನ್ನು ತಿಳಿದಾದ ಮೇಲೆ ಅದರಿಂದ ಪ್ರಭಾವಿತರಾಗಿ ತಾವು ಸಹ ಭಾರತೀಯ ಪದ್ಧತಿಯಲ್ಲಿ ಇನ್ನೊಮ್ಮೆ ವಿವಾಹಗೊಂಡು ನಿಜವಾದ ಅರ್ಥದಲ್ಲಿ ಗಂಡ–ಹೆಂಡತಿಯಾಗಲು ಬಯಸಿದರು. ಅವರ ಈ ವಿಚಾರವು ತಿಳಿದಮೇಲೆ ಎಲ್ಲರಿಗೂ ಸಂತೋಷವಾಯಿತು. ಆದ್ದರಿಂದ ಒಂದು ದಿನ ಎಲ್ಲರಿಗೂ ಅನುಕೂಲವಾಗುವಂತೆ ಜನಪದ ನಿಲಯದಲ್ಲಿ ಸಾರಾ ಹಾಬ್ಸನ್ ಮತ್ತು ಟೋನಿ ಮೇಯರ್‌ರವರ ವಿವಾಹವನ್ನು ಭಾರತೀಯ ಸಂಸ್ಕೃತಿಗೆ ಅನುಸಾರವಾಗಿ ಏರ್ಪಡಿಸಲಾಯಿತು. ಪುರೋಹಿತರನ್ನು ಕರೆಯಿಸಿ ಸಪ್ತಪದಿ ಮಾಡಿಸಿ ಮಾಂಗಲ್ಯವನ್ನು ಸಹ ಕಟ್ಟಿಸಲಾಯಿತು. ಎಲ್ಲವೂ ಅಗ್ನಿಸಾಕ್ಷಿಯಾಗಿ ನಡೆಯಿತು. ಈ ವೈವಾಹಿಕ ಸಂಭ್ರಮವನ್ನು ಅವರಿಬ್ಬರೂ ಬಹಳಷ್ಟು ಮೆಚ್ಚಿಕೊಂಡರಲ್ಲದೆ ಬಹು ಸಂತೋಷಪಟ್ಟರು. ಉಳಿದವರಿಗೂ ಬಹಳ ಸಂತೋಷವಾಯಿತು. ಮತ್ತು ನೋಡಿದವರೆಲ್ಲರ ಜೀವನದಲ್ಲಿ ಅದೊಂದು ಮರೆಯಲಾಗದ ಘಟನೆಯಾಗಿತ್ತು. ಟೋನಿ ಮೇಯರ್ ಆರೂವರೆ ಅಡಿ ಎತ್ತರವಿದ್ದ ವ್ಯಕ್ತಿ, ಸಾರಾ ಹಾಬ್ಸನ್ ಆರು ಅಡಿ ಇದ್ದವಳು. ಇಬ್ಬರು ವಿವಾಹಕ್ಕಾಗಿ ಪಂಚೆ ಮತ್ತು ಸೀರೆಯನ್ನು ಧರಿಸಿ ಹಸೆಮಣೆಮೇಲೆ ಕುಳಿತದ್ದು ಎಲ್ಲರ ಕಣ್ಣಲ್ಲಿ ಸದಾ ಉಳಿಯುವಂಥ ದೃಶ್ಯವಾಗಿತ್ತು.

ಹೀಗೆ ಟ್ರಸ್ಟಿಗೆ ವಿದೇಶಿ ಸ್ನೇಹಿತರ ಭೇಟಿ ಆರಂಭವಾದದ್ದು ೧೯೬೦ರ ಸುಮಾರಿನಲ್ಲಿ. ಮುಂದಿನ ೪೫ ವರ್ಷಗಳಲ್ಲಿಯೂ ಉಳಿದುಕೊಂಡು ಬಂದದ್ದು ಹಳ್ಳಿಯಲ್ಲಿಯ ಸಂಸ್ಥೆಯ ತಲೆಗೆ ಒಂದು ಕಿರೀಟಪ್ರಾಯವಾಗಿ ಶೋಭಿಸಿತು.

(ಮುಂದುವರೆಯುವುದು ......) – ಸುರೇಂದ್ರ ಕೌಲಗಿ

ಜನಪದ ಧ್ವನಿ

ತಂತ್ರಜ್ಞರು ದಂತಗೋಪುರಗಳಿಂದ ಇಳಿದು ಬರಲಿ

ವಿಜ್ಞಾನ, ತಂತ್ರಜ್ಞಾನ ಊಹಿಸಲೂ ಸಾಧ್ಯವಾಗದಷ್ಟು ವೇಗವಾಗಿ ಬೆಳೆಯುತ್ತಿವೆ. ಮನುಷ್ಯನನ್ನು ಸೃಷ್ಟಿಸುವುದು, ಸತ್ತವರನ್ನು ಬದುಕಿಸುವುದು ಎರಡು ಮಾತ್ರ ಸಾಧ್ಯವಾಗಿಲ್ಲ. ಬೇರೆ ಎಲ್ಲ ಸಾಧಿಸಿದ್ದಾರೆ. ಶ್ರಮ ಪ್ರಧಾನವಾದದ್ದೆಲ್ಲವೂ ಬಂಡವಾಳ ಪ್ರಧಾನವಾಗುತ್ತಿದೆ. ಇದರಿಂದ ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೆಲವು ದಿನಗಳ ಹಿಂದೆ ಐವತ್ತೊಂಬತ್ತು ಜವಾನರ ಹುದ್ದೆಗೆ ಮೂವತ್ತು ಮೂರು ಸಾವಿರ ಜನ ಅರ್ಜಿಸಲ್ಲಿಸಿ ಸಂದರ್ಶನಕ್ಕೆ ಬಂದಿದ್ದರು.

ಈ ವಿಜ್ಞಾನ ತಂತ್ರಜ್ಞಾನದ ಇನ್ನೊಂದು ಅನಿಷ್ಟವೆಂದರೆ ಆರ್ಥಿಕ-ಸಾಮಾಜಿಕ ಅಸಮಾನತೆ. ಶ್ರೀಮಂತರ ಶ್ರೀಮಂತಿಕೆ ಮತ್ತು ಬಡವರ ಬಡತನ ಹೆಚ್ಚುತ್ತಿದೆ. ವೈಭವೋಪೇತ ಮಹಲುಗಳು ಹೆಚ್ಚಿದಂತೆ ಕೊಳಗೇರಿಗಳು ಇದಕ್ಕೆ ಮೂರು-ನಾಲ್ಕು ಪಟ್ಟು ಹೆಚ್ಚುತ್ತಿದೆ. ಬೇಡವಾದದ್ದಕ್ಕೆಲ್ಲ ಅನವಶ್ಯಕವಾಗಿ ಹಣ ಹಾಳು ಮಾಡುತ್ತಾರೆ. ಇದೆಲ್ಲ ಅವರ ಹಣ, ಹೇಗಾದರೂ ಮಾಡಿಕೊಳ್ಳಲಿ ಎಂದು ಹೇಳಬಹುದು. ಆದರೆ ನಮ್ಮ ಸಾಧನ ಸಂಪತ್ತುಗಳು ಇವರ ವಿಲಾಸ ವೈಭವದ ಜೀವನಕ್ಕೆ ದುರ್ವ್ಯಯವಾಗುವುದರಿಂದ ಇವರಿಗಿಂತ ಹೆಚ್ಚು ಅವಶ್ಯಕವಾಗಿ ಬೇಕಿರುವವರಿಗೆ ಸಿಗುವುದಿಲ್ಲ.

ಆದರೆ ವೈಜ್ಞಾನಿಕ ಪ್ರಗತಿ ಸಂಶೋಧನೆ ಬೇಡ ಎನ್ನಬಹುದೆ? ಖಂಡಿತ ಇಲ್ಲ. ಬೌದ್ಧಿಕ ಬೆಳವಣಿಗೆ ನಿರಂತರವಾದದ್ದು. ಅದರ ಸಂಶೋಧನೆಗಳ ಫಲವನ್ನು ಸಾಮಾನ್ಯ ಜನರಿಗೆ ತಿಳಿಸಬಹುದು. ಇದಕ್ಕಾಗಿ ಪ್ರತಿಹಳ್ಳಿಯಲ್ಲಿ, ನಗರಗಳ ಒಂದೊಂದು ವಿಭಾಗದಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಮ್ಮ ಸಂಶೋಧನೆಗಳ ಫಲವನ್ನು ಜನರಿಗೆ ತಲುಪಿಸಬಹುದು. ಹೀಗೆ ಮಾಡಿದರೆ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುವ ಬ್ರಿಟಾನಿಯಾ ಬಿಸ್ಕತ್, ಪಾರ್ಲೆ, ಪೆಪ್ಸಿ, ಕೋಕೋಕೋಲಾ ಮುಂತಾದ ವಿದೇಶಿ ಕಂಪನಿಗಳು ಸದ್ದಿಲ್ಲದೆ ಹೋಗುತ್ತವೆ. ದಿನನಿತ್ಯದ ಇನ್ನೂ ಅನೇಕ ಪದಾರ್ಥಗಳನ್ನು ಈ ರೀತಿ ಉತ್ಪಾದಿಸಬಹುದು. ಒಂದೊಂದು ಮನೆಯೂ ಒಂದೊಂದು ಸಣ್ಣ ಉತ್ಪಾದನಾ ಕೇಂದ್ರವಾಗುತ್ತದೆ. ಐದು-ಹತ್ತು ಜನರು ಸೇರಿ ಸಣ್ಣ ಕಾರ್ಖಾನೆಗಳನ್ನು ತೆರೆಯಬಹುದು.

ನಮ್ಮ ತಂತ್ರಜ್ಞರು ದಂತಗೋಪುರಗಳಿಂದ ಇಳಿದು ಜನರಿಗೆ ಕೂಗಿ ಹೇಳಬೇಕು. ಬನ್ನಿ, ನಮ್ಮ ಸಂಶೋಧನೆಗಳ ಫಲ ಎಲ್ಲರೂ ಪಡೆದುಕೊಳ್ಳಿ. ಎಲ್ಲರೂ ನೆಮ್ಮದಿಯಾಗಿರಿ ಎಂದು.

ಹೀಗೆ ಮಾಡಿದರೆ ಈಗ ಇರುವ ಅಸಮಾನತೆ, ಅಪರಾಧಗಳು ಕಡಿಮೆಯಾಗಿ ಉದ್ಯೋಗವಕಾಶಗಳು ಹೆಚ್ಚಾಗಿ ಶಾಂತಿ ನೆಲಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಜನರು ಕ್ರಿಯಾಶೀಲರು, ಸ್ವಾವಲಂಬಿಗಳು ಮತ್ತು ಸ್ವಾಭಿಮಾನಿಗಳಾಗುತ್ತಾರೆ.

- ವಿ. ವೆಂಕಟರಮಣಶೆಟ್ಟಿ, ಮೈಸೂರು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಜನಪದ ಧ್ವನಿ

ಜನಪದ ಧ್ವನಿ ಎಂಬ ಶೀರ್ಷಿಕೆಯಡಿಯಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರತಿಕ್ರಿಯೆಗಳನ್ನು ೧೫ ವಾಕ್ಯಗಳಿಗೆ ಸೀಮಿತಗೊಳಿಸಿ ಬರೆದು ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ... ನಿರ್ದೇಶಕರು
ಉತ್ಥಾನ ಪತ್ರಿಕೆ
ಬೆಂಗಳೂರು

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com